ಅಪರಂಜಿ

ಸಂಪುಟ-೪
ಸಂಚಿಕೆ-೧೧
ಆಗಸ್ಟ್ 1987

ತಿಳಿನಗೆಯ ಕಾರಂಜಿ



- ಆನಂದ್
- ನಳಿನೀ ಪ್ರಿಯ
- ಎಚ್. ಡುಂಡಿರಾಜ್
- ಲಿಂಕ್ಸ್
- ಶಿವು
- ರಾ. ಶಿ.
- ಗೌತಮ
- ಸೂರಿ

ಬಿಡಿಪತ್ರಿಕೆ :ಕೇವಲ ಒಂದೂವರೆ ರೂಪಾಯಿ

ಮಾಸ್‌ಕಾಟ್ ಆಗ್ರೋ ಕೆಮಿಕಲ್ಸ್ ಪ್ರೈವೇಟ್ ಲಿಮಿಟೆಡ್

93, 3ನೇ ಘಟ್ಟ,


ಪೀಣ್ಯ ಇಂಡಸ್ಟ್ರಿಯಲ್ ಏರಿಯಾ,

ಬೆಂಗಳೂರು-560 058

ದೂರವಾಣಿ 385902 ತಂತಿ : 'ಮಾಸ್‌ಕಾಟ್' ಟೆಲೆಕ್ಸ್ 845-580

ಭತ್ತ, ಕಬ್ಬು ಮತ್ತು ಗೋಧಿಯ ಬೆಳೆಗಳಲ್ಲಿ ಕಳೆ ನಿಯಂತ್ರಣ ಮಾಡುವುದಕ್ಕೆ "ನಾಕ್ವೀಡ್" ಕಳೆ ನಾಶಕವನ್ನು ಉಪಯೋಗಿಸಿರಿ.

ಶುಭಾಶಯಗಳೊಂದಿಗೆ :—



ಎನ್ ಎಸ್ ಗಿರಿಮಾಜಿ ಅಂಡ್ ಸನ್ಸ್
[ಬೆಂಗಳೂರು]

ನಂ. 46, ಇಂಡಸ್ಟ್ರಿಯಲ್ ಸಬರ್ಬ್,

ಯಶವಂತಪುರ, ಬೆಂಗಳೂರು-560 022



(ತಿಳಿನಗೆಯ ಕಾರಂಜಿ)

ಸಂಪುಟ ೪ ಆಗಸ್ಟ್ 1987 ಸಂಚಿಕೆ ೧೧

ಬಿಡಿ ಪ್ರತಿ ಕೇವಲ ಒಂದೂವರೆ ರೂಪಾಯಿ
ವಾರ್ಷಿಕ ಚಂದಾ 15/ರೂ.
ಆಜೀವ ಚಂದಾ : 150/ರೂ.
ಪೋಷಕರು : 500/ರೂ.

ಎರಡು ಮಾತು

ಈ ಬಾರಿ ಪುರಾಣದ ಪುಣ್ಯ ಕಥೆಗಳು ಎಂಬ ಶೀರ್ಷಿಕೆಯನ್ನು ಹೊಸದಾಗಿ ನೀಡಿದ್ದೇವೆ. ಓದುಗರ ಪ್ರತಿಕ್ರಿಯೆಯನ್ನು ಗಮನಿಸಿ ಇದನ್ನು ಮುಂದುವರಿಸುವ ಯೋಜನೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ತಿಳಿಸಿ, ಓದುಗ–ಸಂಪಾದಕರ ಮಧ್ಯೆ ಪರಸ್ಪರ ಅಭಿಪ್ರಾಯ ವಿನಿಮಯ, ಯಾವುದೇ ಪತ್ರಿಕೆಗಾದರೂ ಒಂದು ಆರೋಗ್ಯಕರ ಸಂಗತಿ. ಈ ದಿಶೆಯಲ್ಲಿ ಅಪರಂಜಿ ಓದುಗರೂ ಸಹ ಸಹಕರಿಸಬೇಕೆಂದು ನಮ್ಮ ವಿನಂತಿ.

ಶಿವಕುಮಾರ್
ಸಂಪಾದಕ

ಗೌರವ ಸಲಹೆಗಾರರು
ಶ್ರೀ ಅ.ರಾ.ಸೇ.
ಶ್ರೀ ಶೇಷಗಿರಿ

ಅಪರಂಜಿ ಕಾರ್ಯಾಲಯ .
119 [ಹಳೆಯ 36]
6ನೆ ಮುಖ್ಯ ರಸ್ತೆ
ಮಲ್ಲೇಶ್ವರಂ
ಬೆಂಗಳೂರು 560003

ಈ ಸಂಚಿಕೆಯಲ್ಲಿ·······

ವ್ಯಂಗ್ಯ ಚಿತ್ರಗಳು : ಅಶ್ವಥ್, ಶಿವು, ಚಂದ್ರು.

ಮುದ್ರಣ : ಇಂಪ್ರೆಷನ್ಸ್, ಬೆಂಗಳೂರು–3 ದೂರವಾಣಿ : 362989, 363444

ಸುಭಾಷಿತ

ಆದರೆ ವಿತ್ತದಿಂದ ಅಮೃತತ್ವದ ಆಸೆ ಇಲ್ಲ.

—ಬೃಹದಾರಣ್ಯಕ

ಧನದಿಂದ ಅಮೃತತ್ವ ಸಿಗುವುದೇ ಎಂದು ಕೇಳಿದ ಮೈತ್ರೇಯಿಗೆ ಯಾಜ್ಞವಲ್ಕ್ಯನು ಇಲ್ಲವೆಂದನು. ಅಂತಹ ಧನವನ್ನು ಕಟ್ಟಿಕೊಂಡೇನು ಫಲ? 'ನನಗೆ ಅಮೃತತ್ವ ಸಿಗುವ ದಾರಿ ಯಾವುದು?' ಎಂದವಳು ಕೇಳಿದಳು.

ಇಲ್ಲಿ ಈಗ ಹಾಗಿಲ್ಲ. ಅಮೃತತ್ವದಿಂದೇನಾಗಬೇಕು? ಧನ ದೊರಕಿದರಾಯಿತು ಎಂಬ ವಿಚಾರಧಾರೆ ಹಬ್ಬುತ್ತಿದೆ. ದುಡಿಮೆಗೆ ತಕ್ಕ ಫಲ ಎಂಬ ಲೌಕಿಕ ತತ್ವವೂ ನಶಿಸಿದೆ. ಸಿಕ್ಕಷ್ಟು ಗೆಬರಿಕೊಂಡು ಬಿಡೋಣ ಎಂದು ಅಡಿಯಿಂದ ಮುಡಿಯವರೆಗೂ ಚಿಂತೆ. ಅದರಿಂದ ಏನಾದರೂ ಆಗಲಿ ಎಂಬ ಮನೋಭಾವ. ಭ್ರಷ್ಟಾಚಾರ ನಿರ್ಮೂಲನ ಎಂಬ ಕೂಗಿನ ಅರ್ಥ ಹೀಗಿದೆ : ಅವನ ಭ್ರಷ್ಟಾಚಾರ ಕೊನೆಗೊಳ್ಳಲಿ, ನನಗೆ ಒಂದು ಅವಕಾಶ ಸಿಗಲಿ.

ಭಾರತೀಯ ವಿಚಾರಧಾರೆಯನ್ನು ಪ್ರಸ್ತಾಪಿಸುವುದೇ ಅಪರಾಧವೇನೋ ಎಂಬಂತೆ ಮಾತನಾಡುತ್ತಾರೆ. ಇದು ವಿಮುಖಿ ಜೀವನ ಎನ್ನುತ್ತಾರೆ. ಇಂತಹ ಮಹನೀಯರ ವಿಚಾರಧಾರೆ ಕೊಟ್ಟಿರುವ ಫಲವೇನು ? ರಾಷ್ಟ್ರವನ್ನು, ಅದರ ಗಡಿನಾಡುಗಳನ್ನು ನೋಡಿದರೆ ತಿಳಿಯುತ್ತದೆ.

ಈ ಕಹಿ ಫಲವನ್ನುಣ್ಣಲೆಂದೇ ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವೇ? ಅಥವಾ ಇದು ಅಮೃತಮಂಥನ ಕಾಲದಲ್ಲಿ ಮೊದಲು ಹುಟ್ಟಿದ ಹಾಲಾಹಲವೋ?

ಭಾರತ ಇನ್ನಾದರೂ ತನ್ನದೆಂಬುದೇನು, ಅದನ್ನು ಸಾಧಿಸುವುದು ಹೇಗೆ ಎಂದು ಕಂಡುಕೊಳ್ಳಲಿ.

ಅಪರಂಜಿ ಕಿಡಿ

—ಆನಂದ್

ಖಾಸಗಿ ವೈದ್ಯಕೀಯ ಕಾಲೇಜುಗಳು ನಾಯಿಕೊಡೆಗಳಂತೆ ಬೆಳೆಯುತ್ತಿವೆ.

—ಹೇಳಿಕೆ

ಛೆ, ಇಲ್ಲ ; ಕರ್ನಾಟಕದಲ್ಲಿ ಅಷ್ಟು ನಾಯಿಕೊಡೆಗಳೆಲ್ಲಿವೆ ?

* * *

ಆದಾ ಪೈ ಮತ್ತು ಆತೀ ಪೈ ಎಂಬ ಪದಗಳಿಗಿರುವ ವ್ಯತ್ಯಾಸ ತಿಳಿಯಲು ಕಷ್ಟವಾಗುತ್ತದೆ.

—ಶ್ರೀ ವೆಂಕಟರಾಮನ್

ಭಾರತದಲ್ಲಿ ಜಾತೀ ಪೈ ಗೊತ್ತಿದ್ದರೆ ಸಾಕು !

* * *

ಭಾವಚಿತ್ರ ಬಿಂಬಿಸುವ ಟೆಲಿಫೋನ್ ಉಪಕರಣ.

— ಸುದ್ದಿ

ನಮ್ಮ ದೇಶದಲ್ಲಿ ಇದರಿಂದ ಹೇರಳವಾಗಿ ಮನೋರಂಜನೆಯಾಗಬಹುದು !

* * *

ಬೆಂಗಳೂರನ್ನು ನಾಲ್ಕು ವಿಭಾಗಗಳಾಗಿ ಮಾಡುತ್ತಾರಂತೆ.

—ಸುದ್ದಿ

ಹಾಗಾದರೆ ಮೇಯರ್‌ಗಳು ನಾಲ್ಕು ಬಾರಿ ವಿದೇಶ ಯಾತ್ರೆ ಮಾಡಬಹುದು!

* * *

ಭಾರತದ ರಾಜಕೀಯ ಬಿಕ್ಕಟ್ಟನ್ನು ನಿಭಾಯಿಸುವಷ್ಟು ಸಾಮರ್ಥ್ಯ ಭಾರತೀಯರಿಗೆ ಇದೆ.

—ಶ್ರೀ ಗೋರ್ಬಚೇವ್

ಹೌದು, ಆದರೆ ರಾಜಕಾರಣಿಗಳು ಬಿಡಬೇಕಲ್ಲ !

* * *

ಮಾರ್ಟಿನಾ ಅನಭಿಷಿಕ್ತ ರಾಣಿ.

—ವಿಂಬಲ್ಡನ್ ಸುದ್ದಿ

ಪರವಾಗಿಲ್ಲ, ಇಂಗ್ಲೆಂಡಿನಲ್ಲಿ ರಾಣಿಯೇ ಅನಭಿಷಿಕ್ತಳಲ್ಲ ?

* * *

ಅಂಗವಿಕಲರಿಗೆ ಬಿ. ಡಿ. ಎ. ನಿವೇಶನ ಹಂಚಿಕೆ.

—ಸುದ್ದಿ

ಅರ್ಜಿ ಕಳಿಸಿದ ಬಳಿಕ ಬಿ. ಡಿ. ಎ. ಆಫೀಸಿಗೆ ನಡೆದು ನಡೆದು ಹೆಳವರಾದವರಿಗೆ ? ?

* * *

ರಾಷ್ಟ್ರಪತಿ ರಬ್ಬರ್ ಮೊಹರು ಆಗಬಾರದು.

—ಹೇಳಿಕೆ

ಆಧುನಿಕ ಜೆರಾಕ್ಸ್ ಕಾಲದಲ್ಲೂ ರಬ್ಬರ್ ಮೊಹರು ಇನ್ನೂ ದೆಹಲಿಯಲ್ಲಿದೆಯೇ ಎಂದು ಅಪರಂಜಿ ಅಚ್ಚರಿಪಟ್ಟಳಂತೆ !

* * *

ಉದ್ಯಾನ ನಗರದಲ್ಲೊಂದು ಜಿಂಕೆ ವನ.

—ಪತ್ರಿಕೆ


ಸದ್ಯ, ಮಾರೀಚರಿಲ್ಲದಿದ್ದರೆ ವಾಸಿ !

* * *

ಅರ್ಹತೆ ಆಧಾರ ಇನ್ನೂ 165 ವೈದ್ಯಕೀಯ ಸೀಟು.

—ಸುದ್ದಿ

ಮುಂಬರುವ ವರ್ಷಗಳಲ್ಲಿ ರೋಗಿಗಳ ಅಭಾವ ಉಂಟಾಗುತ್ತೋ ಏನೋ ?



ಬೆಂಗಳೂರು ಇಂದು ೧೫

—ನಳಿನೀ ಪ್ರಿಯ

ಆಟದ ರೈಲು

ನಮ್ಮ ಚಂದ್ರಣ್ಣನ ತಮ್ಮ ಮೋಹನ ಅಮೆರಿಕಾದಿಂದ ಹಿಂದಿರುಗಿ ಬಂದಿರೋ ಸುದ್ದಿ ತಿಳಿದಾಗಿನಿಂದ ನನ್ನ ಹೆಂಡತಿಯದು 'ಬನ್ನಿ, ಹೋಗಿ ಬರೋಣ. ನೆಂಟರು, ಇಷ್ಟರು ಅಂದ ಮೇಲೆ ಸ್ವಲ್ಪನಾದ್ರೂ ಕಾಂಟಾಕ್ಟ್ಸ್ ಇಟ್ಕೊಳ್ಳೀ ಬೇಕು' ಅಂತ ಒಂದೇ ರಗಳೆ. ಸರಿ, ಹೇಗಿದ್ರೂ ಸುಮಾರು ದಿನ ಆಗಿತ್ತು ಚಂದ್ರಣ್ಣನ್ನ ನೋಡಿ ಅಂತ ಹೋದ ಭಾನುವಾರ ಅವರ ಮನೆಗೆ ಹೋದೆವು. ಒಳಗೆ ಕಾಲಿಡುತ್ತಲೇ ಸಂಭ್ರಮದ ದೃಶ್ಯ. ಹಾಲಿನ ಮಧ್ಯದಲ್ಲಿ ಡೈನಿಂಗ್ ಟೇಬಲ್ ಮೇಲೆ ಒಂದು ಆಟದ ರೈಲು. ಎಷ್ಟು ಚೆನ್ನಾಗಿತ್ತು ಅಂತೀರಿ. ಟೇಬಲ್ಲಿನ ಅಂಚಿನ ಉದ್ದಕ್ಕೂ ರೈಲು ಕಂಬಿ. ಒಂದು ತುದೀಲಿ ಒಂದು ಪುಟಾಣಿ ಸ್ಟೇಷನ್. ಸ್ಟೇಷನ್ ಮುಂದೆ ಇಂಜಿನ್ನು, ರೈಲು ಗಾಡಿಗಳು. ಚಂದ್ರಣ್ಣ ಸ್ವಿಚ್ ಒತ್ತಿದ ತಕ್ಷಣ ಸರ್ರ್, ಅಂತ ಇಂಜಿನ್ ಮುಂದಕ್ಕೆ ಹೋಗಿ, ಕೈಮರದ ಕೆಂಪು ದೀಪ ಕಂಡ ಕೂಡಲೇ ಗಕ್ ಅಂತ ನಿಂತು ಬಿಡೋದು.

'ಬನ್ನಿ, ಬನ್ನಿ. ಮೋಹನ ನಮ್ಮ ಪಾಪುಗೇ ಅಂತ ಅಮೇರಿಕಾದಿಂದ ಈ ರೈಲು ತಂದಿದಾನೆ. ಈಗ ತಾನೆ ಎಲ್ಲಾ ಜೋಡಿಸಿ ಮುಗಿಸ್ದೆ. ಎಷ್ಟು ಚೆನ್ನಾಗಿ ಮಾಡಿದ್ದಾರೆ ಅಂತೀ. ರೈಲ ನಡೆಸುಕ್ಕೆ ಒಂದು ಪುಟ್ಟ ಕಂಪ್ಯೂಟರ್ ಬೇರೆ ಕೊಟ್ಟಿದಾನೆ ನೋಡೋ!' ಚಂದ್ರಣ್ಣ ಅತೀ ಉತ್ಸಾಹದಿಂದ ರೈಲಿನ ನಿಯಂತ್ರಣಾನೆಲ್ಲಾ ವಿವರಿಸ್ದ.

ನಿಜಕ್ಕೂ ಬಹಳಾ ಚೆನ್ನಾಗಿತ್ತು ಆಟದ ರೈಲು. ಟೇಬಲ್ ಸುತ್ತ ಚಂದ್ರಣ್ಣ, ರಾಜಿ (ಚಂದ್ರಣ್ಣನ ಪತ್ನಿ), ಮೋಹನ, ನಾನು, ನನ್ನ ಅರ್ಧಾಂಗಿ ಎಲ್ಲಾ ನಿಂತು ಆನಂದಿಸಿದ್ದೂ ಆನಂದಿಸಿದ್ದೇ.

ತಿಂಡಿ ತಿಂದು ಕಾಫಿ ಕುಡಿದು ಹೊರಕ್ಕೆ ಬಂದಾಗ ಪಾಪು ಅವನ ಗೆಳೆಯ ರೊಡನೆ ಕುಂಟಾಟ ಆಡ್ತಿದ್ದ.

'ಏನೋ ಪಾಪು, ನಿನ್ನ ಹೊಸಾ ರೈಲು ಜೊತೆ ಆಡೋಲ್ವೇನೋ?, ಅಂತ ಕೇಳಿದೆ.

ಪಾಪು, 'ಇಲ್ಲಾ ಚಿಕ್ಕಪ್ಪಾ, ಬೆಳಗ್ಗೆ ನಾನು ಆಡಕ್ಕೆ ಹೋದ್ರೆ, ಬೆಲೆ ಬಾಳೋ ಸಾಮಾನು ಮುಟ್ಬೇಡಾ ಅಂತ ಅಪ್ಪ ಗದರಿಸಿ ಹೊರಗೆ ಕಳಿಸ್ಬಿಟ್ರು. ಅಪ್ಪ ಅಮ್ಮ ಆಡಿದ್ಮೇಲೆ, ನಾನು ಹೋಗಿ ನೋಡ್ತೀನಿ' ಅಂತ ಹೇಳಿ, ಕುಂಟಾಟದಲ್ಲಿ ಮಗ್ನನಾದ

ಪತ್ರ ವ್ಯವಹಾರ

ಮಕ್ಕಳು ಚಿಕ್ಕೋರಾಗಿದ್ದಾಗ ಗದರಿಸಿಕೊಂಡಿದ್ರೂ, ಅವ್ರು ದೊಡ್ಡೋರಾಗಿ ಬೇರೆ ಊರಿಗೆ.ಓದುಕ್ಕೆ ಹೋದ್ರೆ, ತಾಯಿ ತಂದೆಯರಿಗೆ ಎಲ್ಲಿಲ್ಲದ ಕಾತರ. ನಮ್ಮ ಅಂಬುಜಮ್ಮನೋರನ್ನೇ ತೆಗೆದುಕೊಳ್ಳಿ. ಅವರ ಮಗ ಶಂಕರ, ಮೆಡಿಕಲ್ ಓದುಕ್ಕೆ ಅಂತ ಮಣಿಪಾಲಕ್ಕೆ ಹೋದಾಗಿನಿಂದ, ವಾರಕ್ಕೊಂದು ಬಾರಿ ಇರ್ಲಿ, ತಿಂಗಳಿಗೊಮ್ಮೆ ಯಾದ್ರೂ ಕಾಗದ ಬರೆಯೊಲ್ಲಾ ಅಂತ ಅವರ ಅಹವಾಲು. ಅದಕ್ಕೆ ಅಂಬುಜಮ್ಮ ನೋರ ಯಜಮಾನ್ರು ಒಂದು ಪರಿಹಾರ ಸೂಚಿಸಿದ್ರಂತೆ. ಬನ್ನಿ, ಅದೇನೂ ಅಂತ ಅವರ ಬಾಯಿಂದಲೇ ಕೇಳೋಣ.

'ಅದಕ್ಯಾಕೆ ಯೋಚ್ನೆ ಮಾಡ್ತೀಯೂ ಅಂಬು, ಈ ಕಾಗದದ ಜೊತೆ ಐನೂರು ರೂಗಳ ಚೆಕ್ ಇರಿಸಿದ್ದೇನೆ ಅಂತ ನೀನೇ ಒಂದು ಕಾಗದ ಬರೆದ್ಬಿಡು.

'ನಾನು ಕಾಗದ ಬರೆದು ಚೆಕ್ ಕಳಿಸಿದ್ರೆ ಏನು ಪ್ರಯೋಜನಾರೀ. ಅವ್ನು ಉತ್ತರ ಬರೀಬೇಕಲ್ಲಾ?'

'ಬರೀದೇ ಏನು ಮಾಡ್ತಾನೆ. ಬರ್ದೇ ಬರೀತಾನೆ. ನಿನ್ನ ಕಾಗದದ ಜೊತೆ ಚೆಕ್ ಕಳಿಸೋದನ್ನ ಮರೆತ್ಬಿಟ್ರೆ ಆಯ್ತು!'

ನಿಶಿರಾತ್ರಿ ಚಿತ್ರ

ಅಂಬುಜಮ್ಮನೋರಿಗೆ, ಮಗನ ಕಾಗದ ಬರದೇ ಇದ್ದೆ ಕೆಡೋದು ಸಹಜ. ಆದ್ರೆ ನಮ್ಮ ತಿರುಮಲೇಶ ಪ್ರತಿ ಶುಕ್ರವಾರ ರಾತ್ರಿ ಒಂದು ಘಂಟೆ, ಎರಡು ಘಂಟೆ ವರೆಗೂ ಜಾಗರಣೆ ಮಾಡೋದು ನನಗೇನೋ ಸರಿ ಅನ್ನಿಸೋಲ್ಲ.

ತಿರುಮಲೇಶನಿಗೆ ಆರ್ಟ್ ಫಿಲ್ಮ್ಸ್ ಅಂದ್ರೆ (ಅಯ್ಯೊ ಸ್ವಾಮಿ, ಆಯ್ತು. ಕಲಾತ್ಮಕ ಚಿತ್ರಗಳು ಅಂತ್ಲೇ ಅನ್ನೋಣ) ಏನೋ ಒಂದು ಥರಾ ಹುಚ್ಚು. ದೂರ ದರ್ಶನದೋರು ನಿಶಿರಾತ್ರಿ ಚಿತ್ರ ಪ್ರದರ್ಶನ ಶುರು ಮಾಡ್ದಾಗಿನಿಂದ ಅವನ ಮನೆ ಯೋರಿಗೆಲ್ಲಾ ಜಾಗರಣೆ. ಕಪಿ ತಾನು ಕೆಡೋದಲ್ದೆ ವನಾನೆಲ್ಲಾ ಕೆಡಿಸ್ತು ಅಂದ ಹಾಗೆ ತಿರುಮಲೇಶ ತನ್ನ ಚಾಳೀನ ಮತ್ತೊಬ್ಬರಿಗ್ಗೂ ಅಂಟಿಸೋಕ್ಕೆ ಕಾಯ್ತಿರ್ತಾನೆ. ಕೆಲವು ದಿವಸಗಳ ಹಿಂದೆ ಅವ ನಮ್ಮ ಸೋಮುಗೆ ತಗಲಿಕೊಂಡು ಬಿಟ್ಟಿದ್ದ.

'ನೋಡು ಸೋಮು, ಭಾರತೀಯ ಚಿತ್ರರಂಗದ ಅತ್ಯಂತ ಉತ್ತಮ ಚಿತ್ರ ಗಳನ್ನ, ಈ ನಿಶಿರಾತ್ರಿ ಸರಣೀಲಿ ಪ್ರದರ್ಶಿಸ್ತಿದಾರೆ. ಮುಂದಿನ ವಾರ ನಾನು ನೋಡಿರೊ ಚಿತ್ರಗಳಲ್ಲೇ ಬೆಸ್ಟ್ ಅನ್ನಬಹುದಾದ 'ಅರ್ಥ್' ತೋರಿಸ್ತಾರೆ. ನೀ ಅದನ್ನ ಖಂಡಿತಾ ನೋಡಲೇ ಬೇಕು. ಸೋಮು ದಾಕ್ಷಿಣ್ಯಕ್ಕೆ ಆಗ್ಲಿ ಅಂತ ಒಪ್ಕೊಂಡ.

ಮಾರನೇ ದಿನ ನಾವೆಲ್ಲಾ ಕೂತಿದ್ದಾಗ ಶುರುವಾಯಿತು ತಿರುಮಲೇಶನ ಕೊರೆತ.

'ಸೋಮು, ನಿನ್ನೆ ರಾತ್ರಿ ನೋಡಿದ್ಯೇನೋ ಅರ್ಥ್ ಚಿತ್ರಾನಾ?'

'ನೋಡ್ದೆ ಮರೀ. ನೀ ಹೇಳಿದ ಮೇಲೆ ನೋಡ್ದೆ ಇರ್ತೀನಾ?'

'ಹೇಗಿತ್ತು?'

'ಸೊಗಸಾಗಿತ್ತು. ಎಂಥಾ ಅಭಿನಯ! ಏನು ಕಥೆ!'

'ಸ್ಮಿತಾ ಪಾಟೀಲ್ acting ಹೇಗನ್ನಿಸ್ತು?'

'ಸ್ಮಿತಾ ಪಾಟೀಲ್? ಅರ್ಥ್‌ನಲ್ಲಿ ಸ್ಮಿತಾ ಪಾಟೀಲ್ ಎಲ್ಲಿ ಬರ್ತಾಳೋ, ಶಬಾನಾ ಆಜ್ಮಿ ಅಲ್ವೇನೋ?'

'ಅರೇ ! ಇದೇನೋ ಹೀಗಂತಿ? ಆಗ್ಲೇ ಮರೆತು ಬಿಟ್ಯಾ? ಕುಲ್‌ಭೂಷಣ್ ಖರ್‌ಬಂಡಾ, ಶಬಾನಾ ಆಜ್ಮಿ ಒಂದು ಹೊಸಾ ಫ್ಲಾಟ್ ತೊಗೊಂಡ ಮೇಲೆ, ಖರ್ ಬಂಡಾ ಗೋವಾಕ್ಕೆ ಹೋಗ್ಬಿಟ್ತಾನೆ. ಆಮೇಲೆ ರಾತ್ರಿ ಗೋವಾದಿಂದ ಟ್ರಂಕ್ ಕಾಲ್ ಮಾಡ್ತಾನೆ ಶಬಾನಾಗೆ. ಅವ್ರು ಮಾತಾಡ್ತಾ ಇದ್ದಾಗ, ಖರ್‌ಬಂಡಾ ರೂಮ್‌ನಲ್ಲೇ ಸ್ಮಿತಾ ಓಡಾಡ್ತಿರ್ತಾಳೆ. ಜ್ಞಾಪಕ ಬರಲಿಲ್ವೇನೋ?'


'ಹ್ಞಾ! ಗೋವಾ ಅಂದ ಮೇಲೆ ಜ್ಞಾಪಕ ಬಂತು ನೋಡು. ಅವ್ನು ಗೋವಾ ದಿಂದ ಟ್ರಂಕ್ ಕಾಲ್ ಮಾಡೋ ಹೊತ್ಗೆ ನಿದ್ದೆ ಝೂಕಾಯಿಸಿಕೊಂಡು ಬಂದ್ಬಿಡ್ತು

ನೋಡು. ಆಮೇಲೇನೂ ನೋಡುಕ್ಕೇ ಆಗ್ಲಿಲ್ಲ. ಆದ್ರೆ ಅಲ್ಲೀವರ್ಗೂ ಚಿತ್ರ ಮಾತ್ರ ಏ-ವನ್!'

'ಕೆಲಸ ಬೇಕಾಗಿದೆ'

ಮೊನ್ನೆ ಬೆಂಗಳೂರಿನ ಸುಪ್ರಸಿದ್ಧ ದೈನಂದಿನ ಪತ್ರಿಕೆಯಲ್ಲಿ ಕೆಲಸ ಬೇಕಾಗಿದೆ ಶೀರ್ಷಿಕೆಯಡಿಯಲ್ಲಿ ಕಂಡು ಬಂದ ಒಂದು ಜಾಹೀರಾತು.

'ಸರ್ಕಸ್ ಕೆಲಸದಲ್ಲಿ ಪರಿಶ್ರಮವುಳ್ಳ ವಜ್ರ ದೇಹದ ಗರಡಿ ಜಟ್ಟಿಗೆ ಹಂಗಾಮಿ ಕೆಲಸ ಬೇಕಾಗಿದೆ. ಅದ್ಭುತ ಕಾರ್ಯಗಳ ನಿರ್ವಹಣೆಯಲ್ಲಿ ಎತ್ತಿದ ಕೈ. ತಲೆಗೂದಲನ್ನು ಲಾರಿಗೆ ಕಟ್ಟಿ ಲೀಲಾಜಾಲವಾಗಿ ಎಳೆಯಬಲ್ಲ. ತಿರುಪತಿ ಯಾತ್ರೆಯಿಂದ ಹಿಂದಿರುಗಿರುವುದರ ಪ್ರಯುಕ್ತ ಈ ಜಾಹಿರಾತು. ವಿಳಾಸ: ಸಿಂಗ್ ಗರಡಿ, ಬ್ಯಾಟರಾಯನಪುರ, ಬೆಂಗಳೂರು.



ಸದ್ಯ! ಬದಕ್ಕೊ್ದ. ಡಕಾಯಿತರ ಕೈಗೆ ನಾವು ಸಿಕ್ಲಿಲ್ಲ; ಹೊರಟೋದ್ರು. ಜೀವ ಉಳೀತು.

ಕೋಟೀಶರಾಯರ ಭಾಗ್ಯ

—ಎಚ್. ಡುಂಡಿರಾಜ್

ದೃಶ್ಯ 1

(ರಸ್ತೆ ಬದಿಯಲ್ಲಿ ಉಂಡಾಡಿ ಗುಂಡಣ್ಣ ಮತ್ತು ತಿರುಗಪ್ಪ ಮಾತನಾಡುತ್ತಿದ್ದಾರೆ.)

ತಿರುಗಪ್ಪ : ಉಫ್ ! ಏನಯ್ಯಾ ಉಂಡಾಡಿ, ಈಗಾಗಲೇ ಈ ಹೋಟೆಲ್ಲಿಗೆ ಆರು ಬಾರಿ ಪ್ರದಕ್ಷಿಣೆ ಹಾಕಿ ಆಯಿತು. ಇನ್ನಾದರೂ ಕಾಫಿ ಸೇವೆ ನಡೆಸ್ತೀಯೋ, ಅಥವಾ ಖಾಲೀ ಹೊಟ್ಟೇಲೇ ಕಾಲ ಕಳೀಬೇಕೋ ? ಹಾಳಾದ್ದು, ಈ ಹೊಟ್ಟೆ ಹಸಿದಿರೋವಾಗ ಲೈನ್ ಹೊಡಿಯಲಿಕ್ಕೂ ಮೂಡ್ ಬರೋದಿಲ್ಲ. (ಕೆಲ ಕಾಲ ಮೌನ.) ಏನಪ್ಪಾ, ನಾ ಹೇಳ್ತಿ ರೋದು ಕೇಳಿಸ್ತಾ ಇದೆಯಾ ? ಹೂಂ, ಹಾಂ ಅಂತಾದ್ರೂ ಹೇಳಪ್ಪಾ.

ಗುಂಡಣ್ಣ ಹೂಂ, ಹಾಂ, ಹೂಂ, ಹಾಂ.

ತಿರುಗಪ್ಪ : ಲೋ ಗುಂಡಾ...... ತಮಾಷೆ ಸಾಕು. ಇಲ್ಲಿ ಕೇಳು ಹೊಟ್ಟೆ ಹ್ಯಾಗೆ ತಾಳ ಹಾಕ್ತಾ ಇದೆ.

ಗುಂಡಪ್ಪ : ತಾಳ ಹಾಕ್ತಾ ಇದೆ ತಾನೆ ? ಹಾಕಲಿ ಬಿಡು. ಅದು ಆದಿ ತಾಳಾನೋ, ಏಕ ತಾಳಾನೋ, ರೂಪಕ ತಾಳಾನೋ ಅಂತ ಲೆಕ್ಕ ಹಾಕಿ, ಅದಕ್ಕೆ ಸರಿಯಾದ ಒಂದು ರಾಗ ತೆಗಿ. ನಿನ್ನ ರೋಗ ಪರಿಹಾರ ಆಗುತ್ತೆ.

ತಿರುಗಪ್ಪ : ಪ್ಲೀಸ್ ಗುಂಡಾ, ನಿನ್ನ ದಮ್ಮಯ್ಯ. ಇವತ್ತೊಂದು ದಿನ ನೀನೇ ಕಾಫಿ ಕುಡಿಸು. ನಾಳೆಯಿಂದ ಒಂದು ವಾರ ನನ್ನ ಲೆಕ್ಕದಲ್ಲಿ ಕಾಫಿ.

ಬೇಕಾದರೆ ನಿನ್ನ ಸಾಲದ ಕಾಫಿಗೆ ಬಡ್ಡೀ ಅಂತ ತಿಂಡೀನೂ ಕೊಡಿ ಸ್ತೀನಿ.

ಗುಂಡಪ್ಪ ಸರಿ, ಸರಿ. ನಿನ್ನ ಆ ನಾಳೀನ ನಂಬ್ಕೊಂಡರೆ ನಾನು ನಾಳೆಗೆ ಹೊಳೇನೋ ಕೆರೆನೋ ಹುಡುಕ್ಕೋಬೇಕು. ಅಲ್ಲಯ್ಯಾ, ಎಷ್ಟು ದಿನಗಳಿಂದ ನಾವಿಬ್ಬರೂ ಸೇರಿ ಮೂರನೆಯವರಿಗೆ ನಾಮ ಹಾಕ್ತಾ ಇದೀವಿ. ಈಗ ಯಾರೂ ಬಕರಾಗಳು ಸಿಗಲಿಲ್ಲಾಂತ ನನಗೇ ಟೋಪಿ ಹಾಕಲಿಕ್ಕೆ ನೋಡ್ತೀಯಾ ? ನಡಿ ನಡಿ. ಇನ್ನೊಂದು ರೌಂಡ್ ಹೋಡೆಯೋಣ. ಅದೃಷ್ಟ ಚೆನ್ನಾಗಿದ್ದರೆ ಯಾವನಾದರೂ ಸಿಗ್ತಾನೆ.

ತಿರುಗಪ್ಪ ಹೂಂ, ಇನ್ನೇನು ಮಾಡ್ಡೋದು ? ಈ ಕಡೆ ಹೋಗೋಣವಾ ?

ಗುಂಡಪ್ಪ ಬೇಡ. ಬೇಡ, ಬ್ಯಾಂಕ್ ಬಿಡೋ ಸಮಯ ಆಯ್ತು. ಆ ಕಡೆ ಹೋದರೆ ಯಾವನಾದರೂ ಗಟ್ಟಿ ಕುಳ ಸಿಗಬಹುದು.

ತಿರುಗಪ್ಪ ಗುಂಡಣ್ಣಾ, ಅಲ್ನೋಡು. ರಾಮಣ್ಣ ಬರ್‍ತಿದಾನೆ. ರಾಮಣ್ಣ.

ಗುಂಡಪ್ಪ ತಯಾರಾಗಿರು. ಪ್ರಯತ್ನ ಮಾಡೋಣ. (ಎದುರುಗಡೆಯಿಂದ ರಾಮಣ್ಣ ಬರುತ್ತಾನೆ.)

ತಿರುಗಪ್ಪ : ಓಹೋಹೋ, ನಮಸ್ಕಾರ ರಾಮಣ್ಣೋರೆ, ಚೆನ್ನಾಗಿದೀರಾ ? ಮನೇಲೆಲ್ಲಾ ಕ್ಷೇಮವೊ ? ಸಣ್ಣ ಮಗುವಿಗೆ ನೆಗಡಿ ಅಂತಿದ್ರಲ್ಲ, ಈಗ ಹ್ಯಾಗಿದೆ ?

ಗುಂಡಪ್ಪ ನಮಸ್ಕಾರ ಸಾರ್. ಹ್ಹಿ, ಹ್ಹಿ. ಒಬ್ಬರೇ ಇದೀರಲ್ಲ ! ಕಾಫಿ ಕುಡೀಲಿಕ್ಕೆ ಹೊರಟಿರೋ ಹಾಗಿದೆ. ನಡೀರಿ ಮಾತಾಡ್ತಾ ಕುಡಿ ಯೋಣ. ನಿಮಗೂ ಒಂದು ಕಂಪೆನಿ ಆದ ಹಾಗಾಯ್ತು.

ರಾಮಣ್ಣ : ಪರವಾಗಿಲ್ಲ ಬಿಡಿ. ನಿಂತ್ಕೊಂಡೇ ಮಾತಾಡೋಣ. ನಾನು ಈಗಷ್ಟೇ ಹೋಟೆಲ್ ರೋಮ ಪ್ರಸಾದ್‌ನಲ್ಲಿ ಕಾಫಿ ಕುಡಿದು ಬಂದೆ.

ಗುಂಡಪ್ಪ ರೋಮ ಪ್ರಸಾದ್ ? ಅದ್ಯಾವುದು ಸಾರ್ ಹೊಸಾ ಹೋಟೆಲ್ಲು ?

ರಾಮಣ್ಣ ಹೊಸದಲ್ಲಾರೀ. ನಮ್ಮ ರಾಮಪ್ರಸಾದದಲ್ಲಿ ಈಗೀಗ ತಿಂಡಿ ಜೊತೆ ತಲೆ ಕೂದಲು ಜಾಸ್ತಿ ಹಾಕ್ತಾ ಇದಾನೆ. ಅದಕ್ಕೇ ಹೋಟೆಲ್ 'ರೋಮ ಪ್ರಸಾದಾ' ಅಂದೆ.

ತಿರುಗಪ್ಪ ವಾಹ್ ! ವಾಹ್ ! ನಿಮ್ಮ ಹಾಸ್ಯ ಪ್ರಜ್ಞೆ ಅದ್ಭುತವಾಗಿದೆ ಸಾರ್.

ಗುಂಡಪ್ಪ ನಿಮ್ಮ ಮಾತುಗಳನ್ನು ಕೇಳ್ತಾ ಇದ್ದರೆ ತುಂಬಾ ಮಜಾ ಇರುತ್ತೆ. ಸಾರ್, ಬನ್ನಿ ಕಾಫಿ ಕುಡೀತಾ ಮಾತಾಡೋಣ.

ರಾಮಣ್ಣ ಸ್ವಾಮಿ, ಉಂಡಾಡಿ ಗುಂಡಪ್ನೋರೆ, ಬೀದಿ ತಿರುಗಪ್ಪನೋರೆ. ಬೆಣ್ಣೆ ಹಚ್ಚಿದ್ದು ಸಾಕು. ಈಗಾಗಲೇ ನನ್ನ ತಲೆ ಸಾಕಷ್ಟು ನುಣ್ಣಗಾಗಿದೆ. ನಿಮಗೆ ಇಲ್ಲಿ ಕೆತ್ತಲಿಕ್ಕೆ ಏನೇನೂ ಸಿಗಲಿಕ್ಕಿಲ್ಲ. ನನ್ನ ಹಿಂದೆ ಕೋಟೀಶರಾಯರು ಬರ್ತಿದಾರೆ. ಪ್ರಯತ್ನ ಮಾಡಿ. ವಿಶ್ ಯು ಬೆಸ್ಟ್ ಆಫ್ ಲಕ್.

ತಿರುಗಪ್ಪ : ಹೌದಲ್ಲೋ ! ಕೋಟೀಶರಾಯರು ಬರ್ತಿದಾರೆ.

ಗುಂಡಪ್ಪ ಲಾಟರಿ ಕೋಟೀಶರಾಯರು ! ಗುರೂ, ರೆಡಿಯಾಗಿರು. (ಕೋಟೀಶರಾಯರು ಬರುತ್ತಾರೆ.)

ತಿರುಗಪ್ಪ ಕಂಗ್ರಾಜುಲೇಶನ್ಸ್, ಮಿಸ್ಟರ್ ಕೋಟೀಶ ರಾವ್.

ಗುಂಡಪ್ಪ : ಅಭಿನಂದನೆಗಳು ಕೋಟೀಶರಾಯರಿಗೆ. ಒಂದು ಕೋಟಿ ಅಭಿನಂದನೆಗಳು.

ತಿರುಗಪ್ಪ }
ಗುಂಡಪ್ಪ } ಕೈ ಕೊಡಿ ಸಾರ್ ಕೈ ಕೊಡಿ.

ಕೋಟೀಶ ಯಾಕ್ರಪ್ಪಾ ? ಸುಮ್ ಸುಮ್ನೆ ಯಾಕೆ ಕೈಕೊಡ್ತೀರಿ ? ಇವತ್ತಿನ ಡ್ರಾದಲ್ಲಿ ನನಗೇನೂ ಬರಲಿಲ್ಲ.

ಗುಂಡಪ್ಪ : ಹಾಳಾಗಿ ಹೋಗಲಿ ಸಾರ್. ಇವತ್ತಿಂದು ಮಿನಿ ಡ್ರಾ. ಆಫ್ಟರ್ ಆಲ್ ಒಂದು ಲಕ್ಷ. ಮುಂದಿನ ವಾರದ ಬಂಪರ್ ಒಂದು ಕೋಟಿ ನಿಮಗೇ ಗ್ಯಾರಂಟಿ ಅಂತೆ ! ಅದಕ್ಕೆ ಅಡ್ವಾನ್ಸ್ ಆಗಿ ಕೈ ಕೊಡ್ತಾ ಇದೀವಿ.

ತಿರುಗಪ್ಪ ಹೌದು ಸಾರ್. ನೀವೂ ಅಡ್ವಾನ್ಸ್ ಆಗಿ ಒಂದು ಎಸ್. ಕೆ. ಸಿ.

ಕೊಡಿಸಿ ಬಿಡಿ. ನಡೀರಿ. 'ತಿಂಡಿ ಸಿದ್ಧವಾಗಿದೆ' ಅಂತ ಬೋರ್ಡ್ ಹಾಕಿದ್ದಾರೆ, ಹೋಟೆಲ್ನೋರು.

ಕೋಟೀಶ ಅಲ್ಲಪ್ಪಾ, ಯಾರು ಏನು ಹೇಳಿದರೋ ? ನೀವು ಏನು ಕೇಳಿದಿರೋ... ?

ತಿರುಗಪ್ಪ : ಬೀದೀಲಿ ಹೋಗೋರು ಹೇಳಿದ್ರೆ ನಾವೂ ನಂಬ್ತಾ ಇರ್ಲಿಲ್ಲ ಸಾರ್ ಸಾಕ್ಷಾತ್ ನಮ್ಮ ಲಾಟರಿ ಏಜೆಂಟ್ ಲಕ್ಕಪ್ನೋರೇ ಹೇಳಿದ್ದು.

ಗುಂಡಪ್ಪ ನಿಮ್ಮ ಹತ್ರ ಸುಳ್ಳು ಹೇಳ್ತೀವಾ ಸಾರ್ ? ಇವತ್ತು ಬೆಳಿಗ್ಗೆ ಬಂಪರ್ ಡ್ರಾದ್ದು ಒಂದು ಟಿಕೇಟು ತೆಗಿಯೋಣ ಅಂತ ಲಕ್ಕಪ್ಪನ ಹತ್ತಿರ ಹೋಗಿದ್ವಿ.

ತಿರುಗಪ್ಪ ಇಬ್ಬರೂ ಫಿಫ್ಟಿ, ಫಿಫ್ಟಿ ಶೇರ್ ಹಾಕಿ ಒಂದು ಟಿಕೇಟ್ ತಗೊಂಡ್ವಿ.

ಗುಂಡಪ್ಪ ಟಿಕೇಟು ತಗೊಂಡು ಹೊರಟ ಮೇಲೆ ಲಕ್ಕಪ್ಪ ಏನು ಹೇಳ್ದಾ ಗೊತ್ತಾ ಸಾರ್ ?

ಕೋಟೀಶ : ಏನ್ ಹೇಳ್ದ ? ಏನ್ ಹೇಳ್ದ ?

ತಿರುಗಪ್ಪ ಒಳಗೆ ನಡೀರಿ ಸಾರ್. ಇಂಥಾ ಸಿಹಿ ಸುದ್ದೀನ ಈ ಸಪ್ಪೆ ಬಾಯಲ್ಲಿ, ಅದೂ ಬೀದಿ ಬದೀಲಿ ನಿಂತ್ಕೊಂಡು ನಾವು ಹೇಳಬಾರ್ದು. ನೀವು ಕೇಳಬಾರ್ದು. ಏನಂತೀ ಗುಂಡಣ್ಣ ?

ಗುಂಡಪ್ಪ ನಿಜ, ನಿಜ. ಇಂಥಾ ವಿಷಯವನ್ನೆಲ್ಲ ಪಬ್ಲಿಕ್‌ನಲ್ಲಿ ಹೇಳೋದು ಒಳ್ಳೇದಲ್ಲ ಸಾರ್. ಹೋಟೆಲ್‌ಗೆ ಹೋಗೋಣ. ಡಿಟೈಲ್ ಆಗಿ ಹೇಳ್ತೀವಿ.

(ಹೋಟೆಲ್‌ನ ಒಳಗೆ ಹೋಗುವರು)

ತಿರುಗಪ್ಪ ಇಲ್ಲೇ ಕೂತ್ಕೊಳ್ಳೋಣ ಸಾರ್ ಫ್ಯಾನ್ ಇದೆ. ಏಯ್ ವೆಯಿಟರ್, ತಿಂಡಿ ಏನೇನು ಇದೆ ಅಂತ ಒಮ್ಮೆ ಒದರಿ ಬಿಡಪ್ಪ.

ವೈಟರ್ ಇಡ್ಲಿ ವಡೆ, ರವಾ ಇಡ್ಲಿ, ತುಪ್ಪ ಮಸಾಲೆ, ಪ್ಲೈನ್ ದೋಸೆ, ಪೂರಿ ಭಾಜಿ, ಫ್ಲೋಡಿ——

ತಿರುಗಪ್ಪ ತಡಿ ಮಾರಾಯ. ಸ್ವಲ್ಪ ನಿಧಾನ. ಈ ಥರ ಗಬಾಗಬಾ ಅಂತ ಹೇಳಿದರೆ ಜೀರ್ಣ ಆಗೋದು ಹ್ಯಾಗೆ ?

ವೈಟರ್ ಅಯ್ಯೋ ಬಿಡಿ ಸಾರ್. ನಂಗೊತ್ತಿಲ್ವಾ ? ಎಲ್ಲಾ ತಿಂಡಿ ಹೆಸರು ವಿಚಾರಿಸಿ ಕೊನೆಗೆ ನೀವು ತರಿಸೋದು ಟೂ ಬೈ ತ್ರೀ ಕಾಫಿ ಅಲ್ಲವಾ ?

ಗುಂಡಪ್ಪ ಏಯ್ ! ತಲೆ ಹರಟೆ ಮಾಡ್ಬೇಡ ಇವತ್ತು ನಾವು ಯಾರ ಜೊತೆ ಬಂದಿದೀವಿ ಅಂತ ನೋಡ್ಕೊಂಡು ಮಾತಾಡು. ಲಾಟರಿ ಕೋಟೀಶರಾಯರು ಅಂದರೆ ನಮ್ಮ ಹಾಗೆ 'ಬಪ್ಪರ್' ಅಲ್ಲ, ಬಂಪರ್ ಮನುಷ್ಯ !

ತಿರುಗಪ್ಪ ಮೂರು ಪ್ಲೇಟ್ ಸ್ಪೆಶಲ್ ಸ್ವೀಟ್ ಬರಲಿ. ಅರ್ಜೆಂಟ್ ಏನಂತೀರಿ ಸಾರ್. ಒಂದು ಕೋಟಿ ಮುಂದೆ ಈ ಸ್ವೀಟ್ ಎಲ್ಲ ಯಾವ ಲೆಕ್ಕ !

ಕೋಟೀಶ : ಅದು ಸರಿ ಆದರೆ, ಆ ಲಕ್ಕಪ್ಪ ಏನ್ ಹೇಳಿದ್ದಾ ಅಂತ ...

ಗುಂಡಪ್ಪ ಅಯ್ಯೋ ಅದನ್ನ ಹೇಳಲಿಕ್ಕೇ ಅಲ್ಲವಾ ಸಾರ್. ನಾವಿಲ್ಲಿಗೆ ಬಂದಿರೋದು. ನಾವು ಹೊರಟ ತಕ್ಷಣ ಲಕ್ಕಪ್ಪ ಹೇಳಿದ (ವೈಟರ್‌ಗೆ) ಏಯ್ ಸ್ವೀಟ್ ಎಲ್ಲಪ್ಪ ? ಬೇಗ ತಾ.

ಕೋಟೀಶ ಲಕ್ಕಪ್ಪ ಏನು ಹೇಳಿದ ?

ಗುಂಡಪ್ಪ (ಪಿಸು ದನಿಯಲ್ಲಿ) ಕೇಳಿ ಸಾರ್. 'ಇವರೆಲ್ಲ ಯಾವ ಕರ್ಮಕ್ಕೆ ಟಿಕೆಟ್ ತಗೋತಾರೋ ಏನೋ ? ಕೋಟೀಶರಾಯರು ಈಗಾಗಲೇ ಎಲ್ಲಾ ಲಕ್ಕೀ ಟಿಕೆಟ್‌ಗಳನ್ನೂ ಹೆಕ್ಕಿ ಹೆಕ್ಕಿ ತಗೊಂಡು ಹೋಗಿ ಆಗಿದೆ. ಈ ಸಾರಿ ಬಂಪರ್ ಅವರಿಗೇ ಗ್ಯಾರಂಟಿ' ಅಂತ ಹೇಳ್ತಾ ಇದ್ದ ಸಾರ್, ಲಕ್ಕಪ್ಪ.

ಕೋಟೀಶ ಇರಬಹುದು. ಇರಬಹುದು. ನನಗೂ ಈ ಸಾರೀ ತುಂಬಾ ಆತ್ಮವಿಶ್ವಾಸ ಇದೆ. ಆದರೆ ನೋಡಿ, ನನ್ನ ಹೆಂಡ್ತಿ ಭಾಗ್ಯಲಕ್ಷ್ಮಿ ಮಾತ್ರ ನಾನೆಷ್ಟು ಹೇಳಿದರೂ ನಂಬೋದಿಲ್ಲ. ಲಾಟರಿ ವಿಷಯ ಹೇಳಿದರೆ ಲಟ್ಟಣಿಗೆ ತಗೋತಾಳೆ.

ವೈಟರ್ ಬೇರೆ ಏನು ತರಲಿ ಸಾರ್ ?

ಗುಂಡಪ್ಪ ಮೂರು ಮಸಾಲ, ಮೂರು ಕಾಫಿ ತಾರಪ್ಪ.

ತಿರುಗಪ್ಪ : ಬೆಣ್ಣೆ ಮಸಾಲೆ. ಬೆಣ್ಣೆ.

ಕೋಟೀಶ : ಲೇಟಾಯ್ತಲ್ಲಪ್ಪ. ಯಜಮಾನತಿ ಮನೇ ಸಾಮಾನು ತರಲಿಕ್ಕೆ ಹೇಳಿದಾಳೆ. ಹೇಳಿದ್ದೆಲ್ಲ ನೆನಪಿರಲಿ ಅಂತ ಶರ್ಟಿನ ತುಂಬಾ ಗಂಟು ಹಾಕಿದಾಳೆ ನೋಡಿ.

ತಿರುಗಪ್ಪ : ಪರವಾಗಿಲ್ಲ ಸಾರ್. ನಿಮಗೆ ಒಳ್ಳೇ ಹೆಂಡತೀನೇ ಗಂಟು ಹಾಕಿದಾರೆ.

ವೈಟರ್ : ಇನ್ನೇನ್ ಕೊಡಲಿ ಸಾರ್ ?

ಕೋಟೀಶ : ಏನೂ ಬೇಡಪ್ಪಾ. ಬಿಲ್ ಕೊಟ್ಬಿಡು.

ಗುಂಡಪ್ಪ : ಅದನ್ನು ನೀವು ಕೇಳೋದೇ ಬೇಡ ರಾಯರೆ. ಹೋಟೆಲ್‌ನವರು ನಾವು ಕೇಳದೇ ಇದ್ದರೂ ತಂದು ಕೊಡುವ ಒಂದೇ ಒಂದು ವಸ್ತು ಅಂದರೆ ಈ ಬಿಲ್ಲು. ಹಿ, ಹಿ, ಹಿ. ನಾನು ಸ್ವಲ್ಪ ಕೈ ತೊಳೆದು ಬರ್‍ತೀನಿ.

ತಿರುಗಪ್ಪ : ನಾನೂ ಕೈ ತೊಳ್ಕೊಂಡು ಬರ್‍ತೀನಿ ಸಾರ್.

ಕೋಟೀಶ : (ಸ್ವಗತ) ಕಳ್ಳ ನನ್ ಮಕ್ಳು. ಬಿಲ್ ಬರೋ ಟೈಮಿಗೆ ಕೈ ತೊಳ್ಕೊಂಡು ಬಿಟ್ರು. (ವೈಟರ್‌ಗೆ) ಎಷ್ಟಾಯ್ತಪ್ಪ ಬಿಲ್ಲು ? ತಗೋ.

ಗುಂಡಪ್ಪ : ಏನ್ ಸಾರ್ ತಾವೇ ಕೊಟ್ಬಿಟ್ರಾ ?

ತಿರಂಗಪ್ಪ : ನಾನು ಕೊಡ್ತಾ ಇದ್ದೆ ಸಾರ್ ಆ ಟೈಲರ್ ನನ್ಮಗ ಪ್ಯಾಂಟಿನ ಜೇಬನ್ನ ಟೈಟಾಗಿ ಹೊಲಿದು ಬಿಟ್ಟಿದ್ದಾನೆ. ಪರ್ಸ್ ತೆಗಿಯೋದು ಭಾಳ ಕಷ್ಟ.

ಗುಂಡಪ್ಪ : ಅವರೇ ಕೊಡಲಿ ಬಿಡೋ. ಒಂದು ಕೋಟಿ ಎಣಿಸುವವರಿಗೆ ಇದ್ಯಾವ ಮೂಲೆಗೆ ?

ತಿರಂಗಪ್ಪ : ಏನೋ ಕೆಲಸ ಇದೆ ಅಂತಿದ್ರಲ್ಲ ಸಾರ್. ಸುಮ್ನೆ ನಿಮಗ್ಯಾಕೆ ತೊಂದರೆ ಕೊಡೋದು ? ಬರ್‍ತೀವಿ ಸಾರ್.

ಗುಂಡಪ್ಪ : ಹೋಗ್ಬರ್ತೀವಿ ಸಾರ್. ಮುಂದಿನ ವಾರ ಕೋಟ್ಯಾಧೀಶರಾದ ಮೇಲೆ ನಮ್ಮನ್ನೆಲ್ಲಾ ಮರೀಬೇಡಿ ಸಾರ್.

ಕೋಟೀಶ : ಛೇ, ಛೇ. ನಿಮ್ಮನ್ನು ಹ್ಯಾಗೆ ಮರಿಯೋದು ? ಹೂಂ. ಮುಂದಿನ ವಾರ ಒಂದು ಕೋಟಿ ! (ಮೆಲ್ಲನೆ ಹಾಡು ಗುಣುಗುಣಿಸುವನು.)

ಬಂದರೆ ಮುಂದಿನ ವಾರ
ಬಂಪರ್ ಒಂದು ಕೋಟಿ
ನಾನೂ ಸಾಹುಕಾರ
ಯಾರೂ ನನಗೆ ಸಾಟಿ ? ಆಹಾ ಒಂದು ಕೋಟಿ.
ಓಹೋ ಒಂದು ಕೋಟಿ. ಹೇ, ಹೇ ಒಂದು ಕೋಟಿ.

ವೈಟರ್ : ಏನ್ ಸಾರ್ ಒಂದು ಲೋಟಿ ಒಂದು ಲೋಟಿ ಅಂತಾ ಇದೀರಿ ? ನೀರು ಬೇಕಾ?

ಕೋಟೀಶ : ಅಂ? ಏನಿಲ್ಲಪ್ಪ. ಹೊರಟೆ.

ವೈಟರ್ : ಬಾಗಿಲು ಈ ಕಡೆ ಇದೆ ಸಾರ್

ಕೋಟೀಶ : ಓಹ್. ಐ ಆ್ಯಮ್ ಸಾರಿ. ಥ್ಯಾಂಕ್ಯೂ. ಬರ್ತೀನಿ.

ದೃಶ್ಯ 2

(ಕೋಟೀಶರಾಯರು ಮನೆ ಬಾಗಿಲು ಬಡಿಯುತ್ತಿದ್ದಾರೆ.)

ಕೋಟೀಶ : ಭಾಗೀ, ಭಾಗ್ಯಮ್ಮಾ ಭಾಗ್ಯಾ... ಲೇ ದೌರ್ಭಾಗ್ಯಾ ......

ಭಾಗ್ಯ : (ಒಳಗಿನಿಂದ) ಬಂದೇ... ಯಾರದೂ ?

ಕೋಟೀಶ : ನಾನು ಕಣೆ. ನಿನ್ನ ಗಂಡ ಅನ್ನಿಸಿಕೊಂಡೋನು. ಮದುವೆಯಾಗಿ ಹತ್ತು ವರ್ಷಗಳಾದರೂ ನನ್ನ ಧ್ವನಿ ಗುರ್ತು ಹತ್ತಲಿಲ್ಲೇನು ನಿನಗೆ ?

ಭಾಗ್ಯ : (ಬಾಗಿಲು ತೆಗೆದು) ಏನು ಲಾಟರಿ ರಾಯರೆ ? ಇವತ್ಯಾಕೆ ಲೇಟ್‌ರೀ ರಾಯರೇ ? ಆಫೀಸಿನಲ್ಲಿ ಮೀಟಿಂಗೋ ? ಬಸ್ ಮಿಸ್ ಆಯ್ತೋ? ಹಳೆ ಸ್ನೇಹಿತರು ಸಿಕ್ಕರೋ ? ಇವತ್ತು ಯಾವ ಕಾರಣ ಹೇಳ್ತೀರಿ ?

ಕೋಟೀಶ : ಎಲ್ಲಾ ನೀನೇ ಹೇಳಿಬಿಟ್ಟೆಯಲ್ಲ. ನನ್ನ ಕೆಲಸ ಸುಲಭ ಆಯ್ತು.

ಭಾಗ್ಯ : ಹೋಗಲಿ ನಾನು ಹೇಳಿದ ಹನ್ನೆರಡು ಸಾಮಾನುಗಳಲ್ಲಿ ಒಂದೆರಡಾ ದರೂ ತಂದಿದೀರಾ ?

ಕೋಟೀಶ : ಇನ್ನೊಂದು ವಾರ ತಡಕೋ ಭಾಗ್ಯ. ಹನ್ನೆರಡಲ್ಲ ಚಿಟಕಿ ಹೊಡಿ ಯೋದ್ರೊಳಗೆ ಇಡೀ ಅಂಗಡಿಯನ್ನೇ ನಮ್ಮ ಮನೆಗೆ ತರಸ್ಬಹುದು. ಅಂಥಾ ಒಂದು ಅಮೂಲ್ಯ ಸಾಮಾನು ತಂದಿದೀನಿ.

ಭಾಗ್ಯ : ಗೊತ್ತಾಯ್ತು ಬಿಡಿ. ಲಾಟರಿ ಟಿಕೆಟ್ ಅಲ್ವಾ ? ಇಲ್ಲಿ ಕೊಡಿ. ಅಡಿಗೆ ಮಾಡಲಿಕ್ಕೆ ಸೀಮೆ ಎಣ್ಣೆ, ಕಟ್ಟಿಗೆ, ಗ್ಯಾಸು ಏನೂ ಇಲ್ಲ. ಇದನ್ನೇ ಉಪಯೋಗಿಸ್ತೀನಿ.

ಕೋಟೀಶ : ನನ್ನ ಕರ್ಮ. ಲಾಟರೀ ಲಕ್ಷ್ಮಿ ಮನೆ ಬಾಗಿಲಿಗೆ ಬಂದಿದ್ದಾಳೆ. ಆರತಿ ಮಾಡಿ ಒಳಗೆ ಕರೆಯೋದನ್ನ ಬಿಟ್ಟು ಕೊರೆಯೋದಕ್ಕೆ ಶುರು ಮಾಡಿದೀಯಲ್ಲ. ನಾನು ಏನು ಹೇಳ್ಲಿ ? ಇಲ್ಲಿ ನೋಡು ಬಂಪರ್ ! ಒಂದು ಕೋಟಿ !

ಮಗಳು : ಅಪ್ಪಾ, ಒಂದು ಕೋಟಿ ಅಂದರೆ ವನ್ ಕ್ರೋರ್ ಅಲ್ವಾ ? ಅಬ್ಬಾ !

ಕೋಟೀಶ : ಹೌದಮ್ಮಾ ನೀನು ಜಾಣೆ. ನೋಡು ಈ ಸಣ್ಣ ಹುಡುಗೀಗೆ ಗೊತ್ತಾಯ್ತು ಇದರ ಬೆಲೆ. ನೀನು ಒಲೆಗೆ ಹಾಕ್ತೀನಿ ಅಂತೀಯಲ್ಲ.

ಮಂಗಳು ಪಪ್ಪಾ, ಒಂದು ಕೋಟಿ ಅಂದರೆ ಆರು ಸೊನ್ನೆಯೋ ? ಏಳು ಸೊನ್ನೆಯೋ ?

ಕೋಟೀಶ ; ಸುಮ್ನಿರೇ. ಅಪಶಕುನ. ಸೊನ್ನೆ ಅಂತೆ ಸೊನ್ನೆ. ಮಂಗನಿಗೆ ಹ್ಯಾಗೆ ತಿಳಿಯುತ್ತೆ ಮಾಣಿಕ್ಯದ ಬೆಲೆ. ಭಾಗ್ಯದ ಲಕ್ಷ್ಮಿ ನನ್ನ ಬೆನ್ನು ಹತ್ತಿ ದ್ದಾಳೆ ಅಂತ ಊರೋರೆಲ್ಲಾ ಮಾತಾಡ್ತಾ ಇದ್ದಾರೆ. ಆದರೆ ನನ್ನ ಹೆಂಡ್ತಿ, ಮಕ್ಕಳಿಗೆ ಅದರ ಬೆಲೆ ಗೊತ್ತಿಲ್ಲ. ಹಾಳಾಗಿ ಹೋಗಿ. ಒಂದು ಕೋಟೀಲಿ ಒಂದು ಪೈಸಾನೂ ನಿಮಗೆ ಕೊಡೋದಿಲ್ಲ. ನೋಡ್ತಾ ಇರಿ. ಮೊದಲು ಲಾಟರೀ ಲಕ್ಷ್ಮಿಗೆ ಪೂಜೆ ಮಾಡ್ತೀನಿ.

(ಒಳಗೆ ಹೋಗುವನು)

ಭಾಗ್ಯ : ಹೂಂ. ರಾಮ ರಾಮಾ. ಲಾಟರೀ, ಸೋಡ್ತಿ, ಜೂಜು, ಲಕ್ಕಿ 'ಡಿಪ್ಪು' ಅಂತ ಮನೇ ಮುಳುಗೋ ಸ್ಥಿತಿ ಬಂದರೂ ಇವರಿಗೆ ಈ ಹುಚ್ಚು ಬಿಡಲಿಲ್ಲವಲ್ಲಾ. ನಾನು ಏನು ಮಾಡಲೀ ?

(ಮುಂದುವರಿಯುವುದು)

ಶಾಶ್ವತ ಉಡುಗೊರೆ

—ಲಿಂಕ್ಸ್

ರಾಮಕೃಷ್ಣ ತಾತನಿಗೆ ಇಬ್ಬರು ಮೊಮ್ಮಕ್ಕಳು. ಕಮಲ ಮಗನ ಮಗಳು, ಮಗಳ ಮಗಳು ವಿಮಲ. ಕಮಲ ತಾತನಿಗೆ ಅಚ್ಚುಮೆಚ್ಚು, ವಿಮಲ ಅಷ್ಟಕಷ್ಟೆ.

ಕಮಲನ ಹುಟ್ಟು ಹಬ್ಬಕ್ಕೆ ಪ್ರತಿ ಸಾರಿ ತಾತನಿಂದ ಭಾರಿ ಉಡುಗೊರೆ. ಅವಳಿಗೆ ನಾಲ್ಕು ತುಂಬಿದಾಗಲಂತೂ ತಾತ ಒಂದು ಜರ್ತಾರೀ ಲಂಗವನ್ನೇ ಕೊಟ್ಟಿದ್ದ. ಕೇವಲ 20 ದಿನಗಳ ನಂತರ ವಿಮಲಳ ಹುಟ್ಟುಹಬ್ಬ. ತಾತನ ಮನೋಭಾವ ಗೊತ್ತಿದ್ದರೂ ಎಲ್ಲರ ಮುಂದೆ 'ತಾತ, ನನಗೆ ಏನು ಉಡುಗೊರೆ ತಂದು ಕೊಡ್ತೀಯ ?' ಅಂತ ವಿಮಲ ಮುಗ್ಧತೆಯಿಂದ ಕೇಳಿಯೇ ಬಿಟ್ಟಳು. ತಾತನು ಗಡಬಡಿಸಿ, ಏನು ಹೇಳಬೇಕೆಂದು ತೋಚದೆ, 'ನಿನಗಾ... ನಿನಗಾ' ಎಂದು ತಬ್ಬಿ ಕೊಂಡು ನಾಲ್ಕು ಮುತ್ತುಗಳನ್ನು ಕೊಟ್ಟು, 'ಇದೇ ನಿನಗೆ ಕೊಡುವ ಶಾಶ್ವತವಾದ ಉಡುಗೊರೆ. ತಿಳೀತಾ ?' ಎಂದು ಹೇಳಿ ನುಣುಚಿಕೊಂಡ. ವಿಮಲಳಿಗೆ ಅಳು ಬರುವಂತಾದರೂ ತೋರಿಸಿಕೊಳ್ಳದೇ ಸುಮ್ಮನಾದಳು.

ಮುಂದಿನ ತಿಂಗಳು ಅಜ್ಜಿಯ ಷಷ್ಠ್ಯಬ್ಧಿಪೂರ್ತಿ. ಸಮಾರಂಭ ಸಂಭ್ರಮದಿಂದ ನಡೆಯುತ್ತಿತ್ತು. ಕಿಕ್ಕಿರಿದ ಬಂಧುವರ್ಗ. ತಾತ, ಅಜ್ಜಿ ಉಯ್ಯಾಲೆ ಮೇಲೆ ಕುಳಿತಿರು ವಾಗ ವಿಮಲ ಎಲ್ಲಿಂದಲೋ ಪ್ರತ್ಯಕ್ಷವಾಗಿ ಕೇಳಿಯೇ ಬಿಟ್ಟಳು;

'ತಾತಾ, ತಾತಾ, ನನಗೆ ನಾಲ್ಕನೇ ಹುಟ್ಟುಹಬ್ಬಕ್ಕೆ ಶಾಶ್ವತ ಉಡುಗೊರೆ ಕೊಟ್ಟೆಯಲ್ಲ. ಅದೇ ಉಡುಗೊರೆ ಅಜ್ಜಿಗೂ ಕೊಡಬೇಕು, ತಿಳೀತಾ ? ಅಣ್ಣ ವಿಡಿಯೋ ತೆಗೆಯುಕ್ಕೆ ಸಿದ್ಧವಾಗಿದ್ದಾರೆ. ರೆಡಿ !'

ಈಗಿನ ಕಾಲದ ಮಕ್ಕಳೇ ಹೀಗೆ ಅಂತ ಕಾಣುತ್ತೆ. ಅಲ್ಲವೇ

19

ದಫೇದಾರನ ಹಾಡು

—ಎಚ್. ಡುಂಡಿರಾಜ್


ಹೊರಟ ನೋಡಿ ದಫೇದಾರ
ತನ್ನ ಡ್ಯೂಟಿಗೆ
ಶಿಸ್ತು ಶಾಂತಿ ಹೆಸರಿನಲ್ಲಿ
ಊರ ಲೂಟಿಗೆ

ಖಾಕಿ ಬಟ್ಟೆ ಕಲ್ಲು ಬೂಟು
ನೋಡಿ ಎಂಥ ಒರಟ
ಬೇಟೆಯಾಡಲಿಕ್ಕೆ ಭೂಪ
ಮೀಸೆ ತಿರುವಿ ಹೊರಟ

ಬೀಡಾ ಅಂಗಡಿಗೆ ನುಗ್ಗಿ
'ಕೊಡೋ ಮಗನೇ ಬೀಡಿ'
ಬೀದಿ ಬದಿಯ ಹೋಟೆಲಲ್ಲಿ
ಬಿಟ್ಟಿ ತಿಂದ ತಿಂಡಿ

ರೀತಿ ನೀತಿ ಇಲ್ಲ ಇವಗೆ
ಭಾಷೆ ಬರಿ ಹೊಲಸು
ಮೊದಲು ಏಟು ಬೂಟಿನೊಡೆತ
ಮತ್ತೆ ಕೋರ್ಟು ಕೇಸು

ಶಿಸ್ತು ಭಂಗ ಮಾಡಿದವರ
ಕರೆವ ಊದಿ ಪೀಪಿ
ಐದೋ, ಹತ್ತೋ ತೆತ್ತರಾಯ್ತು
ಎಲ್ಲ ತಪ್ಪೂ ಮಾಫಿ !


ಪುರಾಣದ ಪುಣ್ಯ ಕಥೆಗಳು
ಕಚ - ದೇವಯಾನಿ
ಸಂಜೀವಿನಿ ವಿದ್ಯೆಯನ್ನು ಕಲಿಯಲು ದೇವಗುರು ಪುತ್ರ, ಕಚ, ವಿದ್ಯಾರ್ಥಿಯಾಗಿ, ಅಸುರಗುರುಗಳಾದ ಶುಕ್ರಾಚಾರ್ಯರಲ್ಲಿಗೆ ಬರುತ್ತಾನೆ. ದೇವಯಾನಿ, ಗುರುಪುತ್ರಿ
ಮುಂದೆ ಓದಿ......
ಎನಗೊಂದು ಸೀಟ್ ಬೇಕು
ಯಾವ ಕಾಂಬಿನೇಷನ್?
ಪಿ.ಸಿ.ಎಂ.ಬಿ. ಬೇಡ ಸಂ.ಜೀ.ವಿ.ನಿ. ಕೊಡಿ
ಡೊನೇಷನ್ ಕೊಡ್ತಾನಾ ಕೇಳಪ್ಪಾ!
ಕ್ರಮೇಣ ಕಚ-ದೇವಯಾನಿಯರ ಮಧ್ಯೆ ಮೊಹಬ್ಬತ್ ಉದ್ಭವಿಸಿತು.
ನನ್ನ ಕಣ್ಣಿಗೆ ನೀವು ಶಬಾನಾ ಥರ ಕಾಣಿಸ್ತೀರಿ!
ನೀವು ಥೇಟ ಅಮಿತಾಭ ಥರಾ ಇದ್ದೀರ!
ರಾಕ್ಷಸರು ಇವನ್ನು ಸಹಿಸದೇ ಕಚನನ್ನು ಕೊಂದು ತುಂಡು ಮಾಡಿ ನಾಯಿಗೆ ಹಾಕಿದರು. ದೇವಯಾನಿಯ ಬೇಡಿಕೆಯಂತೆ ಶುಕ್ರಾಚಾರ್ಯರು ಸಂಜೀವಿನಿ ಪ್ರಯೋಗಿಸಿದರು. ಕಚ, ನಾಯಿಯನ್ನು ಸೀಳಕೊಂಡು ಹೊರಬಂದ.
ಕಚಾ- ಬಾ!
ಇಗೋ ಬಂದೆ ಗುರುಗಳೇ!
ಅಯ್ಯೋ ನನ್ನ ಮುದ್ದಿನ ಟಾಮಿ!


ಪುನಃ ರಾಕ್ಷಸರು ಕಚನನ್ನು ಸುಟ್ಟು ಬೂದಿ ಮಾಡಿ ಮದ್ಯದಲ್ಲಿ ಕದಡಿ ಗುರುಗಳಿಗೆ ಕುಡಿಸಿದರು. ದೇವಯಾನಿಯ ಬಲವಂತಕ್ಕೆ ಸಂಜೀವಿನಿಯ ಮೂಲಕ ಕಚ, ತಮ್ಮ ಹೊಟ್ಟೆಯಲ್ಲಿರುವುದು ಗುರುಗಳಿಗೆ ಗೊತ್ತಾಯಿತು.
ಈಗೇನು ಮಾಡಲಮ್ಮಾ?
ಫ್ಯಾಂಟಾಸ್ಟಿಕ್! ಅಸುರ ಲೋಕದ ಮೊಟ್ಟ ಮೊದಲ ಪುರುಷ ಗರ್ಭ ಅಂತ ಥೀಸಿಸ್ ಬರೆದು Phd ಗಿಟ್ಟಿಸ್ತೀನಿ!
ಗುರುಗಳು ಕಚನಿಗೆ ಸಂಜೀವಿನಿ ಬೋಧಿಸಿದ ನಂತರ, ಕಚ, ಗುರು ದೇಹವನ್ನು ಸೀಳಿ ಹೊರಬಂದು, ನಂತರ ಅವರನ್ನು ಸಂಜೀವಿನಿಯಿಂದ ಬದುಕಿಸಲು ಉದ್ಯುಕ್ತನಾದ.
ಕಚಾ - ತಾಳು. ಇದೇ ಒಳ್ಳೇ ಸಮಯ ದೇವಲೋಕಕ್ಕೆ ಓಡಿ ಹೋಗಿ ಬಿಡೋಣ!
ಗುರುಗಳೇ! ಬದುಕಿಬನ್ನಿ
ನನ್ನ ಕೋರ್ಸ್ ಮುಗೀತು. ನಾ ಹೊರಡ್ತೀನಿ
ನಮ್ಮ ಮದುವೆ ಯಾವಾಗ? ದೇವಲೋಕದಲ್ಲಿ ಮನೆ ಬಾಡಿಗೆ ಹೇಗೆ?
ನೀನು ಗುರುಪುತ್ರಿ. ನನ್ನ ಸೋದರಿ. ಮದುವೆ ಪ್ರಶ್ನೇನೇ ಇಲ್ಲ.
ಥೂ! ನೀಚ. ನಿಂಗೆ ಡಿಗ್ರಿ ಸರ್ಟಿಫಿಕೇಟೂ ಇಲ್ಲ. ಮಾರ್ಕ್ಸ್ ಕಾರ್ಡೂ ಇಲ್ಲ. ತೊಲಗಾಚೆ!
ನೀತಿ:- ಯಾವ್ಯಾವುದೋ ಕಾಂಬಿನೇಷನ್ ತಗೊಂಡ್ರೆ ಏನೇನೋ ಆಗುತ್ತೆ.
ರಚನೆ: ಶಿವು
ಚಿತ್ರ: ಚಂದ್ರು

ಚಿತ್ರ ವಿಚಾರ

—ಆನಂದ್

ಕಪ್ಪು ಕಾರು ಮಾರ್ಕೆಟ್ ಮುಂದೆ ನಿಲ್ತು. ಶಾಂತಿ, ರಾಮು ಇಬ್ಬರೂ ಇಳಿದರು. 'ನಾನು ತರ್ಕಾರಿ ತರ್‍ತೀನಿ. ನೀವು ಒಂದು ಲೋಫ್ ಬ್ರೆಡ್ ತಂದು, ಕಾರಲ್ಲೇ ಕೂತಿರಿ ! ಆರ್ಡಿನರಿ ಬ್ರೆಡ್ಡು ತನ್ನಿ, ಸಾಕು !' ಅಂದು, ಶಾಂತಿ ಮಾರ್ಕೆಟ್ಟಿಗೆ ಹೋದಳು. ರಾಮು ಮುಂದೆಯೇ ಇದ್ದ ಅಂಗಡಿಗೆ ಹೋದ. 'ಒಂದು ಬ್ರೆಡ್ ಕೊಡಿ' ಅಂದ. 'ಮಿಲ್ಕ್ ಲೋಫ್ ಕೊಡಲೋ, ಫ್ರೂಟ್ ಇರೋದು ಕೊಡಲೋ ಸಾರ್ ?' ಅಂದ ಅಂಗಡಿ ಮಾಲೀಕ. ರಾಮು 'ಫ್ರೂಟ್ ಇರೋದೇ ಕೊಡಿ !' ಅಂದ. ಅದನ್ನ ತಂದು, ಕಾರಿನಲ್ಲಿ ಕೂತ. ಪಕ್ಕದಲ್ಲಿ ಒಂದು ಕಾರ್ಮಿಕರ ಗುಂಪು ಘೋಷಣೆಗಳನ್ನ ಕೂಗ್ತಾ ಹೋಯ್ತು. ಅವರ ಬೇಡಿಕೆ ಗಳನ್ನ ಕೇಳ್ತಾ ರಾಮು ತಲ್ಲೀನನಾದ.......

'ಸಾರ್, ಇವತ್ತು ಮುಖ್ಯಮಂತ್ರಿಗಳನ್ನ ಮೂರು ಗಂಟೆಗೆ ಭೇಟಿ ಮಾಡ ಬೇಕು, ಅವರೂ ಬಹಳ ಕೋಪದಲ್ಲಿದ್ದಾರೆ. ನೀವು ಇಲ್ದಿದ್ರೆ ನಮ್ಮ ಕೆಲಸ ಆಗೋದಿಲ್ಲ. ಕಾರ್ಖಾನೆಯ ಕೆಲಸಗಾರರೆಲ್ಲ ಬಹಳ ಜೋರಾಗಿ ಗಲಭೆ ಮಾಡ್ತಿದಾರೆ'. ಯೂನಿಯನ್ ಲೀಡರ್ ರಾಮುಗೆ ಯಾವ ಭಯವೂ ಇರಲಿಲ್ಲ. ಮೂರು ಗಂಟೆಗೆ ಮುಖ್ಯಮಂತ್ರಿಗಳ ಕೊಠಡಿಗೆ ರಾಮು, ಅವನ ಆಪ್ತರು ಮೂರು ಜನ ಹೋದರು. ರಾಮು ಹೇಳಿದ : 'ನಿಮ್ಮ ಸಹಕಾರ ಇಲ್ಲದೆ ಈ ಮುಷ್ಕರ ನಿಲ್ಲುವುದಿಲ್ಲ. ನಮ್ಮ ಕೆಲಸಗಾರರು ಕೊನೇ ರಕ್ತದ ಹನಿ ಇರುವವರೆಗೂ ತಮ್ಮ ಹಠ ಬಿಡುವುದಿಲ್ಲ. ನಿಮ್ಮ ಸರ್ಕಾರ ಬಹಳ ಬೇಜವಾಬ್ದಾರಿಯಿಂದ ಹೇಳಿಕೆ ಕೊಟ್ಟು ಪರಿಸ್ಥಿತಿ ಬಿಗಡಾಯಿಸಿದೆ !' ಅವನ ಕಣ್ಣುಗಳು ಕೆಂಡದಂತೆ ಹೊಳೆಯುತ್ತಿದ್ದವು. ಅವನ ಧ್ವನಿ ಕತ್ತಿಯ ಅಲುಗಿನಂತೆ ಹರಿತವಾಗಿತ್ತು. ಮುಖ್ಯಮಂತ್ರಿಗಳು ತಲೆ ಬಾಗಿದರು. 'ರಾಮು ಅವರೇ, ನೀವು ಹೇಳಿದ್ದು ನಿಜ. ಏನಾದರೂ ಮಾಡಿ ಈ ಮುಷ್ಕರ ನಿಲ್ಲಿಸುವ ಹಾಗೆ ಮಾಡಬೇಕು !' ಅಂತ ದೀನವಾಗಿ ಕೇಳಿದರು. ಕಾರ್ಮಿಕ ರನ್ನ ಉದ್ದೇಶಿಸಿ ರಾಮು ಮಾಡಿದ ಭಾಷಣ ನಾಡಿನ ಎಲ್ಲ ಪತ್ರಿಕೆಗಳಲ್ಲೂ ಪ್ರಕಟ ವಾಯ್ತು ! ಮುಷ್ಕರ ನಿಲ್ತು ! 'ಬ್ರೆಡ್ ತಂದ್ರಾ ?' ಶಾಂತಿ ಕೇಳಿದಳು. ರಾಮು ಗಾಬರಿಯಾಗಿ ಸುತ್ತ ನೋಡಿದ. 'ತಂದೆ, ಅಂದು ಕಾರ್ ಸ್ಟಾರ್ಟ್ ಮಾಡಿದ.

'ಪಾಪುಗೆ ಎರಡು ನೋಟ್ ಬುಕ್ ಕೊಂಡ್ಕೋ ಬೇಕು. ಸ್ವಲ್ಪ ಕಾರ್ ನಿಲ್ಸಿ' ಅಂದಳು ಶಾಂತಿ. ಕಾರು ಅಂಗಡಿ ಮುಂದೆ ನಿಲ್ತು. 'ಇಲ್ಲೇ ಕೂತಿರಿ, ಬಂದೆ' ಅಂದು ಶಾಂತಿ ಅಂಗಡಿಗೆ ಹೋದಳು. ಕಾರಿನ ಪಕ್ಕದ ಗೋಡೆ ಮೇಲೆ ಒಂದು ಸಿನಿಮಾ ಪೋಸ್ಟರ್ ಇತ್ತು, ದೊಡ್ಡ ಸೈಜಿಂದು. ಅದರಲ್ಲಿ ಒಬ್ಬ ಡಾಕ್ಟರನ ಚಿತ್ರ ಇತ್ತು—ರೋಗೀನ ಪರೀಕ್ಷೆ ಮಾಡ್ತಿರೋ ತರಹ......

'ಡಾಕ್ಟರೇ' ಬೇಗ ಬನ್ನಿ. ನಮ್ಮ ಅಣ್ಣಂಗೆ ಬಹಳ ಸುಸ್ತಾಗಿದೆ. ನೀವೇ 'ಕಾಪಾಡಬೇಕು' ಅಂತ ಓಡಿ ಬಂದು ದಣಿದಿದ್ದ ಯುವಕ ಕೇಳಿಕೊಂಡ. ರಾಮು ತನ್ನ ಬ್ಯಾಗ್ ಕೈಗೆ ತಗೊಂಡು ಹೊರಟ. ಹಳ್ಳಿಯ ದಾರಿ—ಬಿಸಿಲಿನ ತಾಪ ಬೇರೆ. ರೋಗಿಯ ಮನೆ ಸೇರಿದರು. ಎರಡು ನಿಮಿಷದಲ್ಲಿ ರಾಮುಗೆ ಗೊತ್ತಾಯಿತು. ಇವನಿಗೆ ಅಪೆಂಡಿಕ್ಸ್ ಆಪರೇಷನ್ ಆಗಬೇಕು. ತಡಮಾಡಲು ಸಾಧ್ಯವಿಲ್ಲ. ಸರಿ, ರೋಗೀನ ಎರಡು ಮೈಲಿ ದೂರದಲ್ಲಿದ್ದ ಚಿಕ್ಕ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿದ್ದ ಡಾಕ್ಟರು ಈ ಆಪರೇಷನ್ ದೊಡ್ಡಾಸ್ಪತ್ರೇಲಿ ಮಾಡಬೇಕು. ಇಲ್ಲಾಗುಲ್ಲ ಅಂದರು. ರಾಮು ಹೇಳಿದ 'ಇವನು ಇನ್ನು ಒಂದು ಗಂಟೇನೂ ತಡೆಯಲಾರ. ನಾವಿಬ್ರೂ ಸೇರಿ ಆಪರೇಷನ್ ಮಾಡೋದೇ ಸರಿ. ಹಳ್ಳಿ ಡಾಕ್ಟರು ನಡುಗಿದರು. ರಾಮು ಹೇಳಿದಂತೆ ರೋಗಿಗೆ ಪ್ರಜ್ಞೆ ತಪ್ಪುವ ಔಷಧಿ ಕೊಟ್ಟು, ಆಪರೇಷನ್ ಶುರುವಾಯ್ತು. ಅರ್ಧ ಗಂಟೇಲಿ ರೋಗಿಯ ಸಂಬಂಧಿಕರಿಗೆ ರಾಮು ಹೇಳಿದ 'ಸುಧಾರಿಸಿಕೋತಾನೆ, ಹೆದರಬೇಡಿ !' ರೋಗಿಯ ತಾಯಿ ರಾಮುವಿನ ಕಾಲಿಗೆ ಬೀಳಲು ಯತ್ನಿಸಿದಳು ......

'ಇದೇನ್ರೀ, ಸಾದಾ ಬ್ರೆಡ್ ತನ್ನೀ ಅಂದ್ರೆ ಫ್ರೂಟ್ ಬ್ರೆಡ್ ತಂದಿದೀರ, ಅಂತ ಶಾಂತಿ ರೇಗಿದಳು. ಮರೆತು ಹೋಯ್ತು ಅಂತ ರಾಮು ತೊದಲಿದ. ಸರಿ, ನಾನು ಯಾವ ಕೆಲಸಾನೂ ನಿಮಗೆ ಹೇಳೋಹಾಗಿಲ್ಲ ಅಂದಳು ಶಾಂತಿ. ಕಾರು ಲೈಬ್ರರಿ ಮುಂದೆ ನಿಲ್ತು. ಶಾಂತಿ ಲೈಬ್ರರಿಗೆ ಹೋದಳು. ರಾಮು ಕಾರ್ನಲ್ಲೇ ಕೂತ. ಪಕ್ಕದ ಸ್ಕೂಲಿನಿಂದ ಹುಡುಗರು ಬರುತ್ತಿದ್ದರು. ಇಬ್ಬರು ಹುಡುಗರು ಕ್ರಿಕೆಟ್ ಬ್ಯಾಟುಗಳನ್ನು ಬೀಸ್ತಾ ಬರ್‍ತಿದ್ದರು......

ಸೀಮಿತ ಓವರ್ ಪಂದ್ಯ. ಎದುರಾಳಿಗಳ ಟೀಮು ನೂರೈವತ್ತು ರನ್ನಿಗೆ ಆಲೌಟ್. ರಾಮುಗೆ ನಾಲ್ಕು ವಿಕೆಟ್. ರಾಮು ಟೀಮು ಬ್ಯಾಟ್ ಮಾಡಲು ಶುರು. ಎದುರಾಳಿಗಳ ದಾಳಿಗೆ ತತ್ತರಿಸಿ, ಎಂಟು ಜನ ನಲವತ್ತು ರನ್ನಿಗೆ ಬಿದ್ದರು. ರಾಮು ಬ್ಯಾಟಿಂಗಿಗೆ ಹೊರಟ. ಸಂಗಡಿಗ ಬ್ಯಾಟ್ಸ್‌ಮನ್ ಮಲೇರಿಯಾ ರೋಗಿ

ಯಂತೆ ನಡಗುತ್ತಿದ್ದ ! ರಾಮು ಅವನಿಗ ಧೈರ್ಯ ಹೇಳಿದ ! (ಅರ್ಜುನ ಉತ್ತರನಿಗೆ ಸಹಾಯ ಮಾಡಿದಂತೆ.) ರಾಮು ಬ್ಯಾಟ್ ಬೀಸಲು ಆರಂಭಿಸಿದ ! ಅವನ ಬ್ಯಾಟ್ ಬಿಸಿಲಿನಲ್ಲಿ ಕಂಗೊಳಿಸಿತು ! ಸಂಗಡಿಗನಿಗೆ ಬ್ಯಾಟಿಂಗ್ ಸಿಗದಂತೆ ಕಾಪಾಡಿಕೊಂಡು ಆಡಿದ. ಸ್ಕೋರು ನೂರನಲವತ್ತಾರು ! ರಾಮು ಸಂಗಡಿಗ ಬ್ಯಾಟಿಂಗ್ ಮಾಡುವ ಸಂಭವ. ಸದ್ಯ, ಅವನು ಆ ಓವರ್‌ನಲ್ಲಿ ಉಳಿದ ಒಂದು ಬಾಲನ್ನ ತಡೆಗಟ್ಟಿದ. ಈಗ ರಾಮು ಸರದಿ. ಮೊದಲನೇ ಬಾಲು ಭರ್ಜರಿ ಬೌಂಡರಿ ! ಎರಡನೇ ಬಾಲು ಸಿಂಗಲ್ ಗಿಟ್ಟಿಸಿದಾಗ ಪ್ರೇಕ್ಷಕರೆಲ್ಲ ಮೈದಾನದೊಳಕ್ಕೇ ನುಗ್ಗಿ ದಾಳಿ ಮಾಡಿದರು. ಪ್ರಚಂಡ ಬ್ಯಾಟಿಂಗ್ ಮಾಡಿ ಟೀಮಿನ ಗೆಲುವಿಗೆ ಕಾರಣನಾದ ರಾಮು ಅಭಿಮಾನಿಗಳ ಹೆಗಲು ಸವಾರಿ ಮಾಡಿ ಪೆವಿಲಿಯನ್ ತಲುಪಿದ !....

'ಕಾರಿಗೆ ಪೆಟ್ರೋಲ್ ಬೇಕೆ ?' ಶಾಂತಿ ಕೇಳಿದಳು. ರಾಮು ಕಕ್ಕಾಬಿಕ್ಕಿಯಾಗಿ ಅವಳ ಕಡೆ ನೋಡಿದ. 'ಯಾಕ್ರೀ, ಮೈ ಹುಷಾರಾಗಿದೆ ತಾನೇ ?' ಅಂತ ಶಾಂತಿ ಆತಂಕಪಟ್ಟಳು. 'ನನಗೇನಾಗಿದೆ ? ಈಗ ತಾನೆ ಸೆಂಚುರಿ.......
ರಾಮು ಅರ್ಧ ವಾಕ್ಯದಲ್ಲೇ ನಿಲ್ಲಿಸಿದ.

ಕಪ್ಪು ಕಾರು ಮನೆಯತ್ತ ಸಾಗಿತು.

* * *

(ಥರ್ಬರ್ ನೆರಳು ಲೇಖನದ ಮೇಲೆ ಬಿದ್ದಿದ್ದರೆ ತಪ್ಪು ನನ್ನದೇ !)

"ಇದ್ಯಾಕೆ ಹೀಗಾಗ್ಬಿಟ್ಟಿದ್ದೀ, ಗಜಲಕ್ಷ್ಮಿ, ಗುರ್ತೇ ಸಿಗುವುದಿಲ್ಲವಲ್ಲೇ ?"

"ನನ್ನ ಹೆಸರು ಗಜಲಕ್ಷ್ಮಿ ಅಲ್ಲವಲ್ಲಾ ?"

"ಅಯ್ಯೋ ಹೆಸರು ಕೂಡ ಬದಲಾಯಿಸ್ಕೊಂಡ್ಬಿಟ್ಟಿಯೇನೇ ?"

ಮೂರು ದಶಕಗಳ ಹಿಂದೆ……

ಕೊರವಾವಲೋಕನ



ಬ್ರಾಹ್ಮಣರ ಮನೆ ಅಂಗಳದಲ್ಲಿ ಈಚೀಚೆಗೆ ಅಲಂಕಾರಕ್ಕೆಂದು ಮೀನಿನ ಕೊಳವೊಂದನ್ನು ಗಾಜಿನಲ್ಲಿ ಮಾಡಿಸಿ ಎರಡು ಅಥವಾ ಮೂರು ಅಂಗುಲ ಉದ್ದದ ಬಣ್ಣ ಬಣ್ಣದ ಮೀನುಗಳನ್ನು ಸಾಕುವುದು ವಾಡಿಕೆಯಾಗಿದೆ. ಹರೆಯ ವಯಸ್ಸಿನವರು ತಂಪು ಹೊತ್ತಿನಲ್ಲಿ ಗಾಳಿ ಸಂಚಾರಕ್ಕೆಂದು ಕೆರೆ ದಡದ ಮೇಲೆ ಕುಳಿತು ಕಾಲ ಕಳೆಯುವುದಿಲ್ಲವೇ ? ಅದೇ ರೀತಿ ಈ ಮೀನಿನ ಕೊಳದ ಬಳಿ ಕುಳಿತು ಮೀನಿನ ಕಣ್ಣುಗಳನ್ನೂ, ಅವುಗಳು ತಾರಾಡುವುದನ್ನೂ ನೋಡುತ್ತಾ ಕುಳಿತರೆ ಮೀನಾಕ್ಷಿ ಎಂದು ಮದುರೆಯ ದೇವತೆಗೆ ಹೆಸರೇಕೆ ಇಟ್ಟರು ಎನ್ನುವುದು ಸುಲಭವಾಗಿ ಅರ್ಥವಾಗುತ್ತೆ.

ಆಷಾಢ ಅಮಾವಾಸ್ಯೆ. ಸುಮಾರು ಏಳು ಗಂಟೆ ಇರಬಹುದು. ಹುಲ್ಲುಗಾವಲಿನ ಕಡೆಯಿಂದ ದೌಡುತ್ತಾ, ಕ್ಲಬ್ಬಿನೊಳಕ್ಕೆ ಅರವಾಮುದ್ದು ಬಂದ. ಬಂದವನೇ ಕುರ್ಚಿಯೊಳಕ್ಕೆ ಬಿದ್ದ. ಬಿದ್ದು ಹಣೆ ಒರೆಸಿಕೊಂಡ. ಅನಂತರ ಅವನ ಮುಖ ಕಂಡಿತು ಸುತ್ತಲೂ ಕುಳಿತಿದ್ದ ನಮಗೆಲ್ಲ !

ಮೀನಿನ ಕೊಳದಲ್ಲಿ ದೊಡ್ಡ ಮೀನನ್ನು ಕಂಡ ಸಣ್ಣ ಮೀನು ಯಾವ ರೀತಿ ತನ್ನ ಭವಿಷ್ಯವನ್ನು ಊಹಿಸಿಕೊಂಡು ಸಪ್ಪೆ ಮುಖ ಹಾಕಿಕೊಂಡಿರುತ್ತೋ, ಆ ರೀತಿಯ ಮುಖ ಅರವಾಮುದ್ದುವಿಗಿತ್ತು.

ಕೊರವ ಚಪ್ಪಲಿಯನ್ನು ಕಳಚಿ ಅಂಗಾಲು ಕೆರೆದುಕೊಂಡ. ಅನಂತರ ಕನಿಕರದಿಂದ ಚಪ್ಪಲಿಹಸ್ತನಾಗಿಯೇ, ಅರವಾಮುದ್ದುವನ್ನು 'ಏಕಯ್ಯಾ, ಈ ಮುಖವಾಡ! ಬರಬಾರದ್ದೇನು ಬಂದು ತಾಕಿತು ನಿನಗೆ?' ಎಂದು ಕೇಳಿದ.

ಗೋಗರೆವ ಮುಖದಿಂದ, ಗೋಗರೆವ ದನಿಯಲ್ಲಿ, ಚಪ್ಪಲಿಯನ್ನೇ ನೋಡುತ್ತಾ, 'ಮಳೆ ಶುರುವಾಗಿದೆ. ನನ್ನ ಹೆಂಡತಿ ಚಿಕ್ಕಪೇಟೆಗೆ ಹೋಗಿದ್ದಾಳೆ' ಎಂದ ಅರವಾಮುದ್ದು ಮೊಗಪ್ಪಾಗಿ.

'ನಿನ್ನ ಮಿಸೆಸ್ಸಿಗೆ ಮಳೆ ಬಂದರೆ ಹತ್ತಿರ ಇರುವ ಅಂಗಡಿಗೆ ಹೋಗುವಷ್ಟು ಜಾಣೆಯಲ್ಲವೇ ? ಅಥವಾ ಹೆಸರಿಗೆ ತಕ್ಕಂತೆ ಮಳೆಯಲ್ಲಿ, ಚಿಕ್ಕಪೇಟೆ ಚರಂಡೀಲಿ, ಹರಿವ ನೀರಲ್ಲಿ, ಈಜಾಡುತ್ತಾಳೆ ಅಂತ ನಿನಗೆ ಹೆದರಿಕೆಯೇ ?' ಎಂದ ಕೊರವ, ಕ್ರೂರವಾಗಿ.

ಅರವಾಮುದ್ದು ಆಗ ಕೀಳ್‌ದನಿಯಲ್ಲಿ ಹೇಳಿದ 'ಮಳೆ ನೆಪದಲ್ಲಿ ಅಂಗಡಿಗೆ ಹೋಗೇ ಹೋಗ್ತಾಳೆ. ಅದಕ್ಕೇ ನನಗೆ ಹೆದರಿಕೆ ! ಚರಂಡಿ ನೀರಿನಲ್ಲಿ ಈಜಾಡಿದರೆ ಎಷ್ಟೋ ವಾಸಿ. ನಾನು ಪಾಪರಾಗುಲ್ಲ'

ಅರವಾಮುದ್ದುವಿನ ಎರಡನೆ ವಾಕ್ಯ ಕೊರವನಿಗೆ ಕಟ್ಟುಬಿದ್ದುದನ್ನು ಕಂಡು ನಾವೆಲ್ಲಾ ಹಿಗ್ಗಿ, ಹೀರೇಕಾಯಿ ಬೋಂಡ ತರಿಸಿ ತಿಂದೆವು.

*　　　　*　　　　*

ಶನಿವಾರ ಸಾಯಂಕಾಲ ನಮ್ಮ ಶಾಮು ಕ್ಲಬ್ಬಿಗೆ ಬಂದಿದ್ದ. ಮೂರು ತಿಂಗಳ ಹಿಂದೆ ಆತ ದೆಹಲಿಗೆ ಹೋಗಿ ಸುಪ್ರೀಂ ಕೋರ್ಟಿನಲ್ಲಿ ಲಾಯರಾಗಿದ್ದಾನೆ. ಬಲು ಜಾಣ. ಒಂದು ತಿಂಗಳಿಗೆ ಹತ್ತು ಸಾವಿರ ಸಂಪಾದಿಸುತ್ತಾನೆ. ನಮ್ಮೂರಿನಲ್ಲಿದ್ದಾಗ ಅದೇ ಜಾಣತನಕ್ಕೆ ಒಂದು ವರ್ಷಕ್ಕೆ ಹತ್ತು ಸಾವಿರ ಸಿಗುತ್ತಿತ್ತು. ಎಂತಹ ಶಾಣಿ ಅಂತೀರಿ ಅವ ? ನಮ್ಮೂರಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಈತ ಮೊಕದ್ದಮೆಯೊಂದರಲ್ಲಿ ವಾದಸರಣಿಯನ್ನು ಹೂಡಿ ಮುಗಿಸಿದಾಗ, ಮ್ಯಾಜಿಸ್ಟ್ರೇಟರು ಮಂಕು ಹಿಡಿದವರಂತಾಗಿ ಶಾಮುವಿನ ಕಕ್ಷಿಗಾರನನ್ನು ಖುಲಾಸೆ ಮಾಡುವುದು ಹಾಗಿರಲಿ, ನಡೆದಿದ್ದ ಅಪರಾಧಕ್ಕೆ ತಮಗೇ ತಾವು ಶಿಕ್ಷೆ ವಿಧಿಸಿಕೊಂಡರು. ಅಂತಹ ಜಾಣ ಶಾಮು.

ಆಗ ಬಿಳಿ ಟೋಪಿಯನ್ನು ಧರಿಸಿದ ಕೊರವ ಹೆಜ್ಜೆಯ ಮೇಲೆ ಹೆಜ್ಜೆಯನ್ನು ಸುಸ್ತಾಗಿ ಇಡುತ್ತಾ ಕ್ಲಬ್ಬಿಗೆ ಬಂದ. ಶಾಮು ಕೂಡಲೆ ಛಂಗನೆದ್ದು, ಇದೇನು ಬಂತೋ ನಮ್ಮ ಕೊರವನಿಗೆ ? ರಾಜಕೀಯಕ್ಕೆ ಯಾವಾಗ ಸೇರಿಕೊಂಡನೋ ? ಪಾಪ, ಏನಾಗಿತ್ತು ಇವನಿಗೆ?' ಎಂದು ಕೂಗಿದ.

ಆ ಹೊತ್ತಿಗೆ ಕೊರವ ನಮ್ಮ ಮೇಜಿನ ಬಳಿ ಬಂದ. ಶಾಮುವನ್ನು ತಬ್ಬಿ ಕೊಂಡು 'ಚೆನ್ನಾಗಿದ್ದೀಯಾ?' ಎಂದ.

ಕೊರವನ ತಲೆಯಲ್ಲಿದ್ದುದು. ಬಿಳಿ ಬ್ಯಾಂಡೇಜು ಎಂದು ನಮಗೆ ತಿಳಿಯಿತು. ಶಾಮು ವಿಶ್ವಾಸದ ಕಾತುರತೆಯಿಂದ ಕೊರವನನ್ನು ಕೇಳಿದ 'ತಲೆಗೆ ಹೇಗಪ್ಪಾ ಪೆಟ್ಟುಬಿತ್ತು? ಯಾವಾಗಪ್ಪ?' ಎಂದು.

ಕೊರವ ಕುಳಿತುಕೊಂಡ. ತಲೆಗೆ ಕಟ್ಟಿದ್ದ ಬ್ಯಾಂಡೇಜಿನ ತುದಿಯನ್ನು ನೇವರಿಸುತ್ತಾ ಹೇಳಿದ: 'ನಾನು ರಸ್ತೆಯಂಚಿನ ಫುಟ್‌ಪಾತಿನಲ್ಲಿ ನಡೆದುಹೋಗುತ್ತಿದ್ದೆ ದೊಡ್ಡ ಚೌಕದ ಹತ್ತಿರ. ಆಟೋ ರಿಕ್ಷಾ ಒಂದು ಅವುಲಿನಲ್ಲೇ ಹಾದಿ ತಪ್ಪಿ ನನ್ನ ಪಕ್ಕದಲ್ಲಿ ಬರುತ್ತಿದ್ದ ಹಸುವನ್ನು ಗುಮ್ಮಿ, ನನ್ನ ಮೇಲೇರಿತು. ತಲೆಗೆ ಪೆಟ್ಟು ಬಿತ್ತು. ಕೂಡಲೇ ಚೌಕದಲ್ಲಿದ್ದ ಪೋಲೀಸ್ ಓಡಿ ಬಂದ. ಹತ್ತಿರ ಇದ್ದ ದವಾಖಾನೆಗೆ ಇಲಾಜು ಮಾಡಲು ಕರೆದುಕೊಂಡು ಹೋದ.

ಆಗ ಶಾಮು ಉದ್ರೇಕದಿಂದ ಅಂದ: 'ಒಂದು ತಿಂಗಳು ರಜೆ ಎಂದು ಹಾಗೂ ಬೇರೆ ಮೊಕದ್ದಮೆಗೆಂದು ಬೆಂಗಳೂರಿಗೆ ಬಂದಿದ್ದೇನೆ. ವಿಮಾ ಕಂಪೆನಿಯಿಂದ ಹೇರಳ ಪರಿಹಾರ ಕೊಡಿಸುತ್ತೇನೆ, ಕೊರವ. ಆದರದಿಂದ, ಹಣದ ಆಸೆ ಇಲ್ಲದೆ, ಕೇವಲ ಸ್ನೇಹದ ಕಾಣಿಕೆಯಾಗಿ ಈ ಸೇವೆಯನ್ನು ನಲ್ಲಿಸುತ್ತೇನೆ. ಅಂದ ಹಾಗೆ ಆ ಪೋಲೀಸ್ ಮೊಕದ್ದಮೆಯನ್ನು ದಾಖಲ್ ಮಾಡಿಕೊಂಡಿದ್ದಾನಲ್ಲವೇ?'

ಸನ್ಯಾಸಿಯ ದನಿಯಲ್ಲಿ ಕೊರವ ಉತ್ತರಿಸಿದ:

'ಶಾಮು, ನಿನ್ನ ವಿಶ್ವಾಸದಿಂದಲೇ ನನ್ನ ತಲೆ ನೋವು ಸ್ವಲ್ಪ ಕಡಿಮೆಯಾಗಿದೆ. ಆದರೆ......ಆದರೆ......ಆ ಪೋಲೀಸನಿಗೆ, ಫುಟ್‌ಪಾತಿನಲ್ಲಿ ಹೋಗುತ್ತಿದ್ದ, ಹಸುವಿನ ನೆರಳಲ್ಲಿ ಸಾಗುತ್ತಿದ್ದ, ನನ್ನ ತಪ್ಪೇನೂ ಇಲ್ಲ. ಈ ಆಟೋರಿಕ್ಷಾದವನ ಮೇಲೆ ಮೊಕದ್ದಮೆ ದಾಖಲ್ ಮಾಡಿಕೋ ಎಂದು ಹೇಳಿದೆ.

'ಅವನೇನಂದ ಗೊತ್ತೆ?

'ನೀವ್ಯಾಕ್ರೀ ಫುಟ್‌ಪಾತಿನಲ್ಲಿ ಯಾರಿಗೂ ಕಾಣದ ಹಾಗೆ ಹಸುವಿನ ಮರೆಯಲ್ಲಿ ನಡೆಯುತ್ತಿದ್ರೀ? ಆಟೋ ರಿಕ್ಷಾದವನಿಗೆ ನೀವು ನಡೆಯುತ್ತಿದ್ದುದು ಹೇಗ್ರೀ ಗೊತ್ತಾಗಬೇಕು? ನಿಮ್ಮದೇ ತಪ್ಪು. ಅಲ್ಲದೆ ಆಟೋ ರಿಕ್ಷಾ ಸಾರಥಿಯ ಮಾವ ಈಗ

ಎಂ.ಎಲ್.ಎ. ಅವನ ತಂದೆ ಸಚಿವರ ಮೈಗಾವಲಿನವ. ಅಲ್ಲದೆ ಅವನ ಅಕ್ಕನನ್ನೇ ನಾನು ಮದುವೆಮಾಡಿಕೊಂಡಿರುವುದು ಎಂದ.

'ಈ ಆಟೋ ರಿಕ್ಷಾ ಹಿಡಿಂಬನ ಅಕ್ಕನ ಕೈ ಹಿಡಿದು ಸೆರೆಗೆ ಬಿದ್ದ ಆ ಪೋಲೀಸ ನನ್ನು ಕಂಡು ಬಲು ಕನಿಕರ ಉಂಟಾಯ್ತು. ಮೊಕದ್ದಮೆ ಹೂಡುವುದು ಬೇಡ ಎಂದು ನಾನೇ ಅಂದೆ'.

'ಶಾಮು! ನವೊಡ್ಮನೆ ನೆಮ್ಮದಿಯಿಂದ ನಿನ್ನ ರಜೆಯನ್ನು ಅನುಭವಿಸು' ಎಂದು ಹಿತವಾದ ಹೇಳಿದ ಕೊರವ. ಹಿರಿಯ ವಯಸ್ಸು ಕೊರವನಿಗೆ. ಶಾಮುಗೆ ಅದೂ ಗೊತ್ತು!

ಶಾಣ ಶಾಮು ಏನು ಅನ್ನಲೂ ತಿಳಿಯದೆ 'ಬೇರರ್' ಎಂದು ಕಷ್ಟಕಾಲ ಕ್ಕೊದಗುವ ಭಂಟನನ್ನು ಆಹ್ವಾನಿಸಿದ.

*　　　　*　　　　*

ಆ ಇಂಜಕ್ಷನ್‌ಗಳು ತುಂಬಾ ನೋವಾಗುತ್ತೇನೋ ಎಂದು ಕೇಳಿದೆವು ಕೊರವ ನನ್ನು ಶುಕ್ರವಾರ ಸಂಜೆ.

ಸುಮಾರು ಹನ್ನೆರಡು ದಿನಗಳ ಹಿಂದೆ ಕೊರವ ಶಾಂತಿ ಸದನದ ಮುಂದೆ ಬೆಳಿಗ್ಗೆ ಹೋಗುತ್ತಿದ್ದಾಗ ಬೊಗಳುತ್ತಾ ಬೊಗಳುತ್ತಾ ಅಲ್ಲಿಂದ ಓಡಿಬಂದ ನಾಯಿ ಯೊಂದು ಇವನನ್ನು ಕಾರಣವಿಲ್ಲದೆಯೇ ಕಟಕಾರಿಸಿ ಕಚ್ಚಿ, ಆ ಮಧ್ಯಾಹ್ನವೇ ಸತ್ತು ಹೋಯ್ತು.

ಶಾಂತಿಸದನದ ಮಾಲೀಕ 'ನಿಮ್ಮನ್ನು ಕಚ್ಚಿದ ಮೂರು ಗಂಟೆಯಲ್ಲಿ ನನ್ನ ಫಿ ಫಿ ಸತ್ತುಹೋಯಿತು. ಹುಚ್ಚು ಹಿಡಿದೇ ಸತ್ತುಹೋಯಿತು' ಎಂದು ಅತ್ತೇ ಬಿಟ್ಟಿದ್ದ, 'ಹುಚ್ಚುನಾಯಿ ಕಚ್ಚಿದೆ. ಕಾರಣ ದಿನಕ್ಕೊಂದರಂತೆ ಹದಿನಾಲ್ಕು ದಿನ ಇಂಜಕ್ಷನ್ ತೆಗೆದುಕೊಳ್ಳಲೇಬೇಕು' ಎಂದು ಆಸ್ಪತ್ರೆಯ ಡಾಕ್ಟರು ಕಟ್ಟಾಜ್ಞೆ ಇತ್ತಿದ್ದ.

'ಇಂಜಕ್ಷನ್ ಅಷ್ಟೇನೂ ನೋವಾಗುವುದಿಲ್ಲ ಕಣ್ರೋ! ಆದರೆ ಆಸ್ಪತ್ರೆಯಲ್ಲಿನ ದೃಶ್ಯ ಬಲು ಸೊಗಸು ಕಣ್ರೋ!' ಎಂದ, ಮಂದಸ್ಮಿತನಾಗಿ.

ನಮಗೆಲ್ಲಾ ಕೇಳುವ ಕುತೂಹಲ; ಕೆರಳಿದ ರಾಗ.

'ಈ ಬೆಳಿಗ್ಗೆ ನೋಡಿ. ನನ್ನ ಇಂಜಕ್ಷನ್ ಆದ ಮೇಲೆ ಐದು ನಿಮಿಷ ಅಲ್ಲೇ ಹೊರ ಬೆಂಚಿನ ಮೇಲೆ ಸುಧಾರಿಸಿಕೊಳ್ಳುವ ವಾಡಿಕೆ. ನಾನಾದ ಮೇಲೆ ಕಾಲೇಜ್ ಹುಡುಗನೊಬ್ಬ ಇಂಜಕ್ಷನ್ನಿಗೆ ಸಿದ್ಧವಾಗಿದ್ದ. ಸುಮಾರು ೪೫ ವರ್ಷದ ನರ್ಸು ಅವನ ಹೊಟ್ಟೆಯನ್ನು ಸಿದ್ಧಪಡಿಸುತ್ತಿದ್ದಳು. ನನ್ನೊಡನೆ ಕೂಡ ಚೆಲ್ಲಾಟವಾಡುತ್ತಿದ್ದ ಆಕೆ, ಅವನೊಡನೆ ಸ್ವಲ್ಪ ಮಿತಿಮೀರಿದಂತೆ ಕಾಣಿಸಿತು. ಆಗ M. O. ಬಂದರು. ಮೆಡಿಕಲ್ ಆಫೀಸರ್ ಬಂದರು ಎಂಬ ಹುಷಾರ್ ಕೂಗು ಕೇಳಿಸಿತು. ಆಸ್ಪತ್ರೆಯ M. O. ಅಂದರೆ ಎಲ್ಲರೂ, ನಡುಗಿ ನಡುಗಿ ಕನಸಿನಲ್ಲಿ ಕೂಡ ಬೆಚ್ಚುತ್ತಿದ್ದರು. ಆದರೆ ಆ ನರ್ಸು, ಆ ಹುಡುಗ ಇಬ್ಬರೂ ಶಾಂತಿಯಿಂದ, ಸಾವಧಾನವಾಗಿ, ಕಾರ್ಯಕ್ರಮವನ್ನು ಸಾಗಿಸುತ್ತಲೇ ಇದ್ದರು M. O. ಬಂದರು. ನೋಡಿದರು. ಹಿಂತಿರುಗಿದರು—ಇಂಜಕ್ಷನ್ ಆಯಿತು. ಆ ಹುಡುಗ ನನ್ನ ಪಕ್ಕದಲ್ಲಿ ಬಂದು ಕುಳಿತ. ನರ್ಸು ಮತ್ತೊಬ್ಬನ ಹೊಟ್ಟೆಗೆ ರುಗು ಹಚ್ಚಲು ಶುರುಮಾಡಿದ್ದಳು.

'ಏನು ಧೈರ್ಯವಯ್ಯಾ ನಿಂದು! M. O. ಬಂದರೂ ನಿನಗೆ ಸ್ವಲ್ಪವೂ ಹೆದರಿಕೆಯೇ ಇರಲಿಲ್ಲವಲ್ಲ' ಎಂದೆ.

'ಅಯ್ಯೋ ! ನಂಗೆ ತಿಳಿದಿತ್ತೀ ! ಅವ ಆಕೆಯ ಅಳಿಯ ಅಂತ.

ನಮ್ಮ ನಮ್ಮ ಅನುಭವಗಳನ್ನು ಮೆಲುಕು ಹಾಕುತ್ತಾ ಇದರರ್ಥ ತಿಳಿದೆವು.

* * *

'ಬೇರರ್, ಇದೇನೋ ಎಳನೀರು ತಂದಿರೋದು ! ಹುಳಿಯಾಗಿದೆಯಲ್ಲೋ!' ಎಂದು ರೇಗಿ ಕೂಗಿದ ಕೊರವ, ಭಾನುವಾರ್ತ್ಯುಪಾಧ್ಯಾಪ್ನ.

'ಸಾರ್! ಇದು ಮೊರಾರ್ಜಿ ಎಳನೀರು' ಎಂದ ಬೇರರ್.

ಕೊರವ ನಕ್ಕ. 'ಒಪ್ಪಿದೆ. ಬೇರರ್' ಎಂದ ಕೊರವ ತನ್ನ ತುಟಿಗೆ ಗಾಜಿನ ಗ್ಲಾಸಿನ ತುಟಿಯನ್ನು ಚುಂಬಿಸುತ್ತಾ.

ನನ್ನ ಹಣೆಯ ಮೇಲಿನ ಅಡ್ಡ ಗಂಧ ಪ್ರಶ್ನಾರ್ಥಕವಾಯಿತು. ಅರವಾಮುದ್ದನ ಕೆಂಪು ನಾಮ ಪ್ರಶ್ನಾರ್ಥಕವಾಯಿತು. ಆನಂದುವಿನ ಅಂಗಾರ ಕೂಡ ಪ್ರಶ್ನಾರ್ಥಕವಾಯಿತು.

ಇದನ್ನು ಕಂಡ ಕೊರವ ಒಂದು ಪುರಾಣ ಕತೆ ಹೇಳಿದ.

ಪೋರ್ಟರ್ ನರಸರಾಜು ಸ್ಟೇಷನ್ ಮಾಸ್ತರ ಬಳಿಗೆ ಹೋಗಿ, 'ನನ್ನ ಹೆಂಡತಿಗೆ ಸಖತ್ ಖಾಯಿಲೆ. ಮೂರು ದಿನ ರಜೆ ದಯಪಾಲಿಸಿ' ಎಂದ.

'ನಿನ್ನ ಹೆಂಡ್ತಿ ಕಾಗದ ಬರೆದಿದ್ದಾಳೆ. ನೀನು ಆಕೇನ ಬಲು ಗೋಳುಹೊಯ್ಕೊತ್ತೀಯಂತೆ. ಕುಡಿದು ಬಡಿಯುತ್ತೀಯಂತೆ. ನಿನಗೆ ರಜಾ ಕೊಡಬಾರದಂತೆ, ಎಂದ ಮಾಸ್ಟರ.

'ಹುಕುಂ! ಬಮೋಜೀಬ್ ! ! ನೀವು ಹೇಳಿದಂತೇ ಇರಲಿ. ಆದರೆ ಸಾರ್! ನಮ್ಮಿಬ್ಬರನ್ನೂ ಮಿಂಚಿದ ಸುಳ್ಳುಗಾರರು ಸಪ್ತ ಲೋಕಗಳಲ್ಲೂ ಇಲ್ಲವೇ ಇಲ್ಲ ಸಾರ್! —ನನಗೆ ಮದುವೆಯಾಗಿಲ್ಲ ! !'

ಸ್ಟೇಷನ್ ಮಾಸ್ತರು ನಾಲ್ಕು ದಿನ ರಜೆ ಮಂಜೂರುಮಾಡಿದನಂತೆ.

ಮಾರನೆ ಬೆಳಿಗ್ಗೆ ಇದರ ಮರ್ಮ ಅರ್ಥವಾಯಿತು ನನಗೆ, ಎರಡನೆ ದಿನ ಮುದ್ದುವಿಗೆ, ಮೂರನೆ ದಿನ ಆನಂದನಿಗೂ ಕೂಡ! !



ಹೋದ ವಾರ ಪಕ್ಕದ್ಮನೆಯಿಂದ ಒಂದ್ಬಟ್ಲು ಕಾಫಿ ಪುಡಿ ತಂದಿರಲ್ಲ ಈಗ ಬೇಕಂತ ಹೇಳಿ ಕಳ್ಸಿದಾರೆ. ಎಂತಾ ಸ್ಥಿತಿಗೆ ಬಂದ್ಬಿಟ್ರು ಜನ ನೋಡೀಂದ್ರೆ, ಪಾಪ!

ಹಿನ್ನೆಲೆ ಸುದ್ದಿ

—ಗೌತಮ

'ಬಾರಯ್ಯ ಚೇಲಾ. ಒಳ್ಳೇ ಸಮಯಕ್ಕೇ ಬಂದೆ. ಇನ್ನೇನು ಚಿತ್ರಮಂಜರಿ ಷುರುವಾಗತ್ತೆ ಬಾ, ಬಾ.,

ನನ್ನ ಮಾತು ಕೇಳಿ ಚೇಲ ಗಕ್ಕನೆ ನಿಂತ. ನನ್ನನ್ನೇ ನೋಡಿದ—ತಿಂದು ಬಿಡುವವನಂತೆ.

'ನೋಡು ಮರೀ. ನಾನು ಬರೋದು ನಿಂಗಿಷ್ಟ ಇಲ್ದಿದ್ರೆ ಅಂಗಂತ ಯೇಳ್ಬಿಡು; ಅದ್ಬಿಟ್ಬಿಟ್ಟು ಚಿತ್ರಮಂಜರಿ ನೋಡೋಕೆ ಬಾ ಅಂತ ಯಾಕಪ್ಪ ಕರೀತೀಯಾ?' ಅಂದ.

'ಓಹ್ಹೋಹೋ. ಬೇಡಯ್ಯ. ಟೀವೀನ ಆಫ್ ಮಾಡ್ತೀನಿ ಬಾ' ಅಂದೆ. ಒಳಗೆ ಬಂದ. ಎದುರು ಬದುರು ಕೂತೆವು.

ಟೀವೀಲಿ ರಾಜೀವ್ ಗಾಂಧಿ ಬರ್ತಿದ್ದದ್ದು, ಅನಂತರ ಅದು ಕಮ್ಮಿಯಾದದ್ದು, ಇತ್ತೀಚೆಗೆ ರಾಮಾಯಣ ಷುರುವಾದದ್ದು, ಮುಂತಾದವುಗಳ ಮೇಲೆ ಹರಟೆ ಕೊಚ್ಚಿದೆವು. ಟೈಂ ಪಾಸ್ ಆದದ್ದೇ ತಿಳಿಯಲಿಲ್ಲ; ಒಂದು ಸಲ ವಾಚ್ ನೋಡಿಕೊಂಡ ಚೇಲ.

'ಮರಿ, ಮರಿ, ಟೀವಿ ಆಕು' ಅಂದ.

'ಏನಯ್ಯ ಇದೆ ಈಗಾ?'

'ಇಂಗ್ಲೀಷ್ ನ್ಯೂಸು, ಮರೀ. ಅದನ್ನು ಕೇಳಾಕೆ ಅಂತ್ಲೆ ನಾನೀಗ ಬಂದದ್ದು.

'ಏನು ವಿಶೇಷ ಇದೆಯಯ್ಯ ನ್ಯೂಸಲ್ಲಿ?'

'ನ್ಯೂಸ್ ಬೇಡ ಮರೀ ನನ್ಗೇ. ಆದೇನೋ ನೋಡ್ಕಳ್ದಲೇನೇ ನ್ಯೂಸೋದ್ತಾ ರಂತಲ್ಲ. ಅದೆಂಗೇ ಅಂತ ನೋಡೋವಾ ಅಂತ ಬಂದೆ'.

'ಹೌದಾ?' ಅನ್ನುತ್ತಿದ್ದಂತೆ ಟೀವೀಲಿ ಚಿತ್ರ ಕಾಣಿಸಿಕೊಂಡಿತು. ಮಾತು ನಿಲ್ಲಿಸಿ ಟೀವಿ ನೋಡುವಂತೆ ಸೂಚಿಸಿದ.

ಪುಷ್ಪಾಂಜಲಿ ಅಯ್ಯರ್ ಸುದ್ದಿ ಓದಲು ಷುರು ಮಾಡಿದಳು. ನೋಡಿದೆ-ಸುದ್ದಿ ಓದುವುದನ್ನು-ಕೇಳಿದೆ. ಆಶ್ಚರ್ಯವಾಯಿತು.

'ಹೌದಲ್ಲ ಚೇಲಾ. ಅದು ಹೇಗೆ ಅಷ್ಟಷ್ಟುದ್ದದ ನ್ಯೂಸ್ ಓದ್ತಾರೇ? ಉರು ಹೊಡೀತಾರೆ ಅಂತ ಕಾಣತ್ತೆ. ಅಲ್ವಾ?'

'ಅಯ್ಯಯ್ಯಯ್ಯ. ಏನ್ ಮರೀ. ಅವರೇನು ನಿನ್ನಾಗ ಪುಟ್ಟನಂಗೆ ಎಲ್ಕೇಜಿ ಮಗೂನಾ?'

'ಮತ್ತೆ?'

'ಅದ್ಕಂಡಿಡಿಯೋಕೇಂತ್ಲೆ ನಾನ್ ಬಂದಿರೋದು. ನನ್ಕೇಳಿದ್ರೇ.........ಉಂ... ಓದ್ದೋರು, ಕಲಿತೋರು, ಗೊತ್ತಿರೋ ಸುದ್ದೀನ ಓದೋದು ಅಂತ ಕಷ್ಟವಾಗಾಕಿಲ್ಲ, ಅಂತಾ. ...

'ಹಾಗಾಗೋಲ್ಲ ಚೇಲಾ. ನ್ಯೂಸೂ ಗೊತ್ತಿರಭೋದು. ಸಲೀಸಾಗಿ ಮಾತೂ ಆಡಭೋದು. ಆದರೆ ಅಷ್ಟೊಂದು ಪಾಯಿಂಟ್ಸ್‌ನ ಅಷ್ಟಷ್ಟೇ ಮಾತುಗಳಲ್ಲಿ ನೋಡಿಕೊಳ್ದೇ ಹೇಳೋಕಾಗೋಲ್ಲ. ಆವಾಗ ಟೈಂ ಹೆಚ್ಚೂ ಕಡಿಮೆ ಆಗತ್ತೆ. ಒಟ್ಟಿನಲ್ಲಿ ಹಾಗಲ್ಲ ಅಂತೆ'

'ಇಂಗ್ಯಾಕಿರ್ಬಾರ್ದು? ಫಾರಿನ್ ಕಂಟ್ರೀಸ್‌ನಲ್ಲಿ ಅಂಗೇಂತೆ.

'ಹೇಗೇ?'

'ಟೀವಿ ಕ್ಯಾಮರ ಇಂದೇನೇ, ಸಿನಿಮಾದಲ್ಲೀಯಂಗೆ, ಕೆಳಗಿಂದ ಮೇಲ್ಕೆ ಪ್ರಿಂಟ್ ಮಾಡಿರೋ ನ್ಯೂಸ್ ಓಯ್ತಾ ಇರ್ತದಂತೆ. ಅದ್ನೋದೋವಾಗ ನಮ್ಮನ್ನ ನೋಡ್ದಂಗೇ ಇರ್ತೈತಂತೆ.

'ಇರಭೋದು ಚೇಲಾ. ನೀನು ಹೇಳೋದೂ ಒಂದು ರೀತಿ ಸರೀನೇ ಇರಭೋದು. ಇರು ಆಕೆ ಕಣ್ಣು ನೋಡಿದರೆ ಗೊತ್ತಾಗತ್ತೆ.

ಇಬ್ಬರೂ ನೋಡಿದೆವು.

'ಏನೂ ಗೊತ್ತಾಗೋಲ್ವಲ್ಲ, ಮರೀ' ಅಂದ.

'ಗೊತ್ತಾಗ್ದೇ ಇರಲಿ ಅಂತಲೇ ಕ್ಲೋಸ್ ಷಾಟ್‌ನಲ್ಲಿ ತೋರಿಸದೇ ಇರೋದು.

'ಔದು ಮರಿ. ಓದ್ತಾ ಇದಾರೋ ಇಲ್ಲವೋ ಅನ್ನೋದು ಗೊತ್ತಾಗ್ದಂಗೇ ದೂರದಿಂದ್ಲೇ ತೋರಿಸ್ತಾ ಅವ್ರು.

'ಆ ತರಹ ಇಲ್ಲ ಅಂತ್ಲೇ ಇಟ್ಟುಕೋ. ಇನ್ಯಾಕ್ಯಾಗಿರಬೋದು ಚೇಲಾ?'

ಇಬ್ಬರೂ ತಲೆ ಕೆರೆದುಕೊಂಡೆವು. ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ಉಹ್ಞು. ಉಹ್ಞು. ಉಹ್ಞು.

ಇದ್ದಕ್ಕಿದ್ದಂತೆ ಚೇಲ ಚಿಟಿಕೆ ಹೊಡೆಯುತ್ತ 'ಮರೀ' ಅಂತ ಕಿರುಚಿದ.

'ಗೊತ್ತಾಯ್ತಾ ಚೇಲಾ?!' ಅಂತ ನಾನೂ ಕಿರುಚಿದೆ.

'ಒಳೀತಂ ಮರೀ ನಂಗೊಳೆದೇ ಬಿಡ್ತು. ತುಂಬಾ ಸಿಂಪಲ್ಲು ಮರೀ. ಜಾನಕಿ, ಸುಶೀಲ, ಎಸ್ಪಿ, ಜೇಸುದಾಸು ಅವ್ರೆಲ್ಲ ಸಿನೆಮಾದಾಗೆ ಇನ್ನೆಲೆ ಸಂಗೀತ ವಿಳಾಕಿಲ್ವಾ, ಅಂಗೇನೇಯ, ಇವರು, ನ್ಯೂಸ್ ಓದೋರು ಪಿಟಪಿಟಾಂತ ತುಟಿ ಆಡಿಸ್ತಿರ್ತಾರೆ. ಇನ್ನೆ ಲೇಲಿ ಒಬ್ರು ಸುದ್ದಿ ಓದ್ತಿರ್ತಾರೆ. ಅಷ್ಟೇ. ಏನಂತೀಯ ಮರೀ?' —ಎಂದ.

'ವಂಡರ್‌ಫುಲ್ ಚೇಲಾ' ಅಂತ ಅವನ ತೊಡೆ ತಟ್ಟಿದೆ.

ಸಾತಕ್ಕ —ನಿಮ್ಮನೆ ಪಕ್ಕದ ಮನೆಗೆ ಬಾಡಿಗೆಗೆ ಬಂದಿರೋರು ಯಾರೆ ?

ಪಾತಕ್ಕ —ಯಾರೋ ತಿಳೀದಮ್ಮ, ಅತ. ಆಕೆ ಇಬ್ಬರೇ ಇದ್ದಾರೆ.

ಸಾ —ಗಂಡ, ಹೆಂಡತಿ ?

ಪಾ —ಅಲ್ಲ ಅಂತ ಅನ್ನಿಸುತ್ತೆ. ಎಂಟುದಿನವಾಯಿತು. ಇನ್ನೂ ಒಂದು ಸಲವೂ ಜಗಳ ಕಾದಿದ್ದು ಕೇಳಿಸಿಲ್ಲ !

ಹೈಪೋಕಾಂಡ್ರಿಯಾಕ್

—ಸೂರಿ

ನಂ ಡಾಕ್ಟರ ಹತ್ತಿರ ನಾನು ಕಂಪೌಂಡರ್‌ಗಿರಿ ಅಂತ ಮಾಡೋಕ್ಕೆ ಶುರುವಾಗಿ ಈ ಜೂನ್ ಇಪ್ಪತ್ತಾರಕ್ಕೆ ಇಪ್ಪತ್ತೈದು ವರ್ಷ ಆಗತ್ತೆ. ಅವಾಗ್ಲಿಂದಲೂ ನಾನೂ ನೋಡ್ತಾನೆ ಇದ್ದೀನಿ. ಈ ಸುಬ್ಬಯ್ಯ ಇದಾನೆ ನೋಡಿ. ಅವನಂಥಾ ತರಲೆ ಗಿರಾಕಿ ಇನ್ನೊಬ್ಬ ಇಲ್ಲ. ಮಿಕ್ಕ ಪೇಷಂಟುಗಳೂ ಇದಾರೆ, ಪಾಪ. ಏನೋ ಜ್ವರವೋ, ನೆಗಡೀನೋ, ಕೆಮ್ಮೋ ಅಂತ ನಿಜವಾಗಿಯೂ ತೊಂದರೆ ಪಟ್ಕೊಂಡು ಬರ್‍ತಾರೆ ಡಾಕ್ಟ್ರು ಬರಕೊಟ್ಟ ಗುಳಿಗೇನೋ, ಇಲ್ಲಾ ನಾನು ಬೆರಸಿಕೊಟ್ಟ ಔಷಧಾನೋ ನಂಬಿಕೆಯಿಂದ ಇಸಕೊಂಡು ಗಂಭೀರವಾಗಿ ಮನೇಗೆ ಹೋಗ್ತಾರೆ. ಆದ್ರೆ ಈ ಸುಬ್ಬಯ್ಯ ? ಉಹುಂ. ಒಂದು ದಿನ ಆ ರೀತಿ ಮಾಡಿದ್ರೆ ಕೇಳಿ. ಮೂರು ಮೂರು ದಿನಕ್ಕೊ ಬಂದು ವಕ್ಕರಿಸ್ಕೋತಾನೆ, ನಂ ಡಾಕ್ಟರಿಗೇ ಗೊತ್ತಿಲ್ಲದೇ ಇರೋ ಅಂಥಾ ಯಾವುದಾದರೂ ಖಾಯಿಲೆ Symptoms ತನಗಿದೆ ಅಂತ ಹೊಡಕೋತಾನೆ. 'ನಿಮಗೇನೂ ಆಗಿಲ್ಲಪ್ಪ. ಒಳ್ಳೆ ಕಲ್ಲು ಗುಂಡಿದ್ದ ಹಾಗಿದ್ದೀರಿ. ಅಷ್ಟು ಬೇಕೂ ಅಂತ ಇದ್ರೆ ಒಪ್ಪತ್ತು ಉಪವಾಸ ಮಾಡಿ. ಸ್ವಲ್ಪ ತೂಕಾನಾದ್ರೂ ಇಳಿಯುತ್ತೆ ಅಂತ ಹೇಳಿದ್ರೆ ಕೇಳಲೊಲ್ಲ. ನಂ ಷಾಪಲ್ಲೇ ಎಲ್ಲಿ ಪ್ರಾಣ ಹೋಗಿ ಬಿಡತ್ತೋ ಅನ್ನೋ ಥರಾ ಆಡಿ ಬಿಡ್ತಾನೆ. ಆಯ್ತಪ್ಪ, ಇವನ್ನ ಸಾಗಿ ಹಾಕೋಕೆ ಅಂತ ಏನಾದರೂ ಔಷಧ ಕೊಟ್ರೆ ತಗೊಂಡು ಸುಮ್ಮನೆ ಹೋಗ್ತಾನೆಯಾ ? ಅದೂ ಇಲ್ಲ. 'ಇದೇನು ಔಷಧ ? ಇದರ ಫಾರ್ಮುಲಾ ಏನು ? Side reactions ಏನಾದ್ರೂ ಇರತ್ತಾ ? ಈ ಔಷಧೀ ಬದಲು ಇನ್‌ಜೆಕ್ಷನ್ ಕೊಡೋಕ್ಕೆ ಆಗಲ್ಲವೇ' ಅಂತೆಲ್ಲಾ ಶುರೂ ಮಾಡ್ಕೋತಾನೆ. ನನಗೋ ಅವನ್ನ ನೋಡಿದೆ ಅಂದ್ರೆ ಸಾಕು ಒದ್ದು ಆಚೆಗೆ ಹಾಕೋಣವೇ ಅನ್ನಿಸತ್ತೆ. ಆದ್ರೆ ನಂ ಡಾಕ್ಟ್ರು ? ಪಾಪ, ದ್ವಾಪರ ಯುಗದಲ್ಲಿ ಹುಟ್ಟಬೇಕಾಗಿದ್ದವರು. ಬಹಳ ನಿಧಾನಸ್ಥ. ಎಲ್ಲವನ್ನೂ ಸದ್ದಿಲ್ಲದೆ ಸಹಿಸಿಕೋತಾರೆ.

ಹೋದ ವಾರ ಏನಾಯ್ತು ಅಂತೀರ ? ಸಾಯಂಕಾಲ ಎಂದೂ ಇಲ್ಲದಷ್ಟು ಜನಾ. ಅದೇನೋ ನಲ್ಲೀನಲ್ಲಿ ಅಪರೂಪಕ್ಕೆ ನೀರು ಬಂತೂ ಅನ್ನೋ ಸಂತೋಷದಲ್ಲಿ

ಅದನ್ನ ಯದ್ವಾ ತದ್ವಾ ಕುಡಿದು ಖಾಯಿಲೆ ತರಿಸಿಕೊಂಡು ಬಂದಿದ್ರೋರೇ ಎಲ್ಲಾ. ಒಂಭತ್ತೂವರೆವರೆಗೂ ಬಿಡುವಿಲ್ಲದಷ್ಟು ಕೆಲಸ ಮಾಡಿ ಇಬ್ಬರೂ ಸುಸ್ತಾ ಹೊಡದು ಹೋಗಿದ್ವು. ಮನೆಗೆ ಹೋಗಿ ಬಿದ್ಕೊಂಡ್ರೆ ಸಾಕಪ್ಪಾ ಅನ್ನಿಸ್ತಾ ಇತ್ತು. ಅಷ್ಟು ಹೊತ್ತಿಗೆ ಸರಿಯಾಗಿ ಬರಬೇಕೇ ಈ ಗೂಬೆ ಸುಬ್ಬಯ್ಯ ? ಎಂದೂ ಇಲ್ಲದ್ದು ಅವತ್ತು ಡಾಕ್ಟ್ರು ಕೂಡ ಸ್ವಲ್ಪ ಮುಖಾನ ಹುಳ್ಳಗೇ ಮಾಡಿಕೊಂಡ್ರು. ಅಲ್ಲವೇ ಮತ್ತೆ ? ಸ್ವಲ್ಪ ಸದರಾ ಕೊಟ್ರೆ. ನಾವು ಮನೆಗೆ ಹೋಗೋದು ಹನ್ನೊಂದು ಗಂಟೆಗೇನೆ, ಅಷ್ಟೆ.

ಅಷ್ಟು ಹೊತ್ನಲ್ಲಿ ಬಂದು ಹೇಳಿಕೊಳ್ಳೋ ಅಂಥಾ ಹೊಸ ರೋಗಾ ಇವನಿಗೆ ಯಾವುದು ಬಂತು ಅಂತ ಕೇಳೋ ಅಗತ್ಯಾನೇ ನಮಗೆ ಬರಲಿಲ್ಲ. ಅವನೇ ಬಿಚ್ಕೊಂಡ ಕಂತೇನ

'ಯಾಕೋ ಡಾಕ್ಟ್ರೇ,' ಒಂದು ವಾರದಿಂದಲೂ ದೇಹದಲ್ಲಿ ವಿಪರೀತ ಸುಸ್ತಾಗ್ತಾ ಇರತ್ತೆ. ಏನು ಮಾಡೋಕು ಮನಸ್ಸೇ ಇಲ್ಲ. Symptoms ಎಲ್ಲಾ ನೋಡಿದ್ರೆ, ಅನೀಮಿಯಾ ಇದ್ದ ಹಾಗೆ ಕಾಣತ್ತೆ ಉದಾಸೀನ ಮಾಡಿ, ನಾಳೆ ದಿವಸಾ ತೊಂದರೆಗೆ ಸಿಕ್ಕೋ ಬಾರದಲ್ಲ, ಅದಕ್ಕೇ ಓಡಿಕೊಂಡು ಬಂದೆ.

ಅನೀಮಿಯಾನ ? ಸುಬ್ಬಯ್ಯನಿಗಾ ? ಊರಲ್ಲಿರೋ ಸೊಳ್ಳೆಗಳಿಗೆಲ್ಲಾ ಒಂದು ವರ್ಷ ಸಮಾರಾಧನೆ ಮಾಡಿಸಬಹುದು ಅಷ್ಟೊಂದು ರಕ್ತ ಇದೆ ಅವನ ಮೈನಲ್ಲಿ. ಆದರೆ ಹಾಗೇ ಅಂತ ಅವನಿಗೆ ಹೇಳಿ ಬದಕ್ಕೋಕ್ ಆಗತ್ಯೆ ? ಸರಿ, ಸೂಜಿ ತಕ್ಕೊಂಡು ಅವನ ಬೆರಳಿಗೆ ಚುಚ್ಚಿ ಸ್ಲೈಡ್ ಮೇಲೆ smear ತಗೊಂಡಿದ್ದಾಯ್ತು. ಒಂದು ನಿಮಿಷಾ ಅದನ್ನ examine ಮಾಡಿದ ಹಾಗೆ ನೋಡಿ ಹೇಳಿದ್ರು ಡಾಕ್ಟ್ರು

'ಕಂಗ್ರಾಚುಲೇಷನ್ಸ್ ಮಿಸ್ಟರ್ ಸುಬ್ಬಯ್ಯ, ನೀವು ಹೇಳಿದ ಹಾಗೇನೇ ನಿಮಗೆ ತುಂಬಾನೆ ಅನೀಮಿಯಾ ಆಗಿದೆ. ಇನ್ನ ಎರಡು ದಿನಾ ಬಿಟ್ಟಿದ್ರೆ, ಕಂಟ್ರೋಲಿಗೆ ಬರ್ತಾ ಇರ್ಲಿಲ್ಲ......ಚೆನ್ನಾಗೇ ಡಯಾಗ್ನೋಸ್ ಮಾಡ್ತೀರಪ್ಪ, ಡಾಕ್ಟ್ರುಗಳ ತಲೇ ಮೇಲೆ ಹೊಡೆದ ಹಾಗೆ.

ಸುಬ್ಬಯ್ಯನ ಮುಖಾ ನೋಡಬೇಕಾಗಿತ್ತು. ಒಳ್ಳೇ ಹುಂಜದ ಹಾಗೆ ಹಿಗ್ಗಿ ಹೋಗಿದ್ದ. ನೋಡಿದ್ರಾ ಮಿಸ್ಟರ್ ಕಾಶೀಪತಿ ಅನ್ನೋ ಥರದಲ್ಲಿ ನನ್ನ ಕಡೆ ಒಂದು ಸಲ ನೋಡಿ, ಡಾಕ್ಟರಿಗೆ ಸಲಹೆ ಕೊಟ್ಟ :

'ಹಾಗಾದರೆ ಒಂದು ಕೋರ್ಸ್ ಇಂಜಕ್ಷನ್ ಶುರೂ ಮಾಡೋದು ವಾಸೀ ಅಂತ ಅನಿಸತ್ತೆ ...Delay may be dangerous, ಏನಂತೀರಾ ಡಾಕ್ಟ್ರೆ ?'

ಡಾಕ್ಟ್ರಿಗೋ ಕೋಪ ಏರ್‍ತಾ ಇತ್ತು. ಪ್ರಯತ್ನಪಟ್ಟು ಸಮಾಧಾನ ತಂದು ಕೊಂಡು ಹೇಳಿದ್ರು

'ನೀವು ಹೇಳೋದು ಕರೆಕ್ಟೇ ಮಿಸ್ಟರ್ ಸುಬ್ಬಯ್ಯ. ಆದ್ರೂನೂವೆ, ಈಗ ಒಂದು ಹೊಸಾ ಟಾನಿಕ್ಕು ಬರಕೊಡತೀನಿ. ಅದನ್ನು ಎರಡು ಬಾಟಲು ಮುಗಿಸಿ. ತುಂಬಾ iron content ಇರೋದರಿಂದ, ನಿಮ್ಮ ಅನೀಮಿಯಾ ಬಹಳ ಬೇಗ ಕಂಟ್ರೋಲಿಗೆ ಬಂದು ಬಿಡತ್ತೆ. ಹಾಗೇನಾದ್ರೂ ಆಗಲಿಲ್ಲ ಅಂದ್ರೆ, There is no alternative, ನಿಮ್ಮ ಸಲಹೇನೇ ನಾನು follow ಮಾಡಬೇಕಾಗತ್ತೆ.

ಆಶ್ಚರ್ಯ ಅಂದ್ರೆ, prescription ಇಸಕೊಂಡು ಫೀಸನ್ನ ಟೇಬಲ್ಲ ಮೇಲೆ ಇಟ್ಟು ಹೆಚ್ಚಿಗೆ ಮಾತಾಡದೆ ಹೊರಟೇ ಹೋದ ಸುಬ್ಬಯ್ಯ. ದೇವರು ಇದಾನೆ ಅನ್ನೋದರ ಮೇಲೆ ಸ್ವಲ್ಪ ನಂಬಿಕೆ ಬರೋ ಹಾಗಾಯಿತು.

ಆದರೆ, ಹೋದ್ಯಾ ಪಿಶಾಚಿ ಅಂದ್ರೆ, ಬಂದೆ ಗವಾಕ್ಷೀಲಿ ಅಂತಾರಲ್ಲ, ಆ ಥರಾ ಎರಡೇ ನಿಮಿಷದಲ್ಲಿ ಮತ್ತೆ ಹಾಜರು, ಪಾರ್ಟಿ ! ಏನು ಗ್ರಹಚಾರಾನಪ್ಪ, ಇಷ್ಟು ಬೇಗಲೇ ಇನ್ನಾವ ಖಾಯಿಲೆ ಹತ್ತಿಸ್ಕೊಂಡು ಬಂದ್ನಪ್ಪಾ ಇವನು ?

'ಒಂದು ಮುಖ್ಯವಾದ ವಿಷ್ಯಾನೆ ಮರತು ಬಿಟ್ಟಿದ್ದೆ ಡಾಕ್ಟ್ರೇ, ಹಾಳು ಜೀವ ಭಯದಲ್ಲಿ. ಈ ಔಷಧಾ ಬರಕೊಟ್ಟಿದ್ದೀರಲ್ಲ, ಅದನ್ನ ತಗೋತಿರೋವಾಗ ಏನಾದರೂ precautions ನ follow ಮಾಡಬೇಕಾ, ಹ್ಯಾಗೆ ?... ಊಟ ತಿಂಡೀಲೇ ಆಗಲೀ, ಮತ್ತೆ ಇನ್ನೊಂದರಲ್ಲೇ ಆಗಲೀ....?'

'Precautions ಏ ?......ಹ್ಞಾ, ನೀವು ಕೇಳಿದ್ದು ಒಳ್ಳೇದೇ ಆಯ್ತು ಅನ್ನಿ. ಛೆ, ನಾನೂ ಕೂಡ ಮರತೇ ಬಿಟ್ಟಿದ್ದೆ ....ಈ ಔಷಧಾ ತಗೋತಿರುವಾಗ, ಹೆಚ್ಚಿಗೆ ನೀರಲ್ಲಿ ಆಡೋದಾಗಲೀ, ಮಳೇಲಿ ನೆನೆಯೋದಾಗಲಿ ಮಾಡಕೂಡದು, ತಿಳೀತಾ ? ಸದ್ಯ, ಎಲ್ಲಾದರೂ ಮರತು ಗಿರತು ಹೋದೀರಿ.

ಅರೆ, ಡಾಕ್ಟ್ರು ಈವತ್ತು ಇದೇನ್ನು ಹೊಸದಾಗಿ ಹೇಳ್ತಾ ಇದ್ದಾರಲ್ಲ ! ಅಲ್ಲ, ಎಷ್ಟೊಂದು ಜನಕ್ಕೆ ಬರಕೊಟ್ಟಿಲ್ಲ ಈ ಟಾನಿಕ್ಕನ್ನ ಇಲ್ಲೀ ತನಕಾ ? ಯಾರಿಗೂ

ಇಲ್ಲದ್ದು ಈ ಸುಬ್ಬಯ್ಯನಿಗ್ಯಾಕೆ side effects ಆಗಬೇಕು ? ಆಶ್ಚರ್ಯ ಪಟ್ಟು ಕೊಂಡೆ: ಅವರ ಮುಖ ನೋಡಿದೆ... ಧರ್ಮರಾಯನ ಸಹನೇಗೂ ಒಂದು ಮಿತಿ ಇದೆ ಅನ್ನೋದು ಚೆನ್ನಾಗಿ ಕಾಣಿಸ್ತಾ ಇತ್ತು.

'ಯಾಕೆ, ಯಾಕೆ, ಡಾಕ್ಟ್ರೆ, ನೀರು ಮುಟ್ಟಿಸ್ದ್ರೆ ಥಂಡೀ ಆಗ್ಬಿಟ್ಟು, ನ್ಯೂಮೋನಿಯಾ, ಗೀಮೋನಿಯಾ ಅಂತೇನಾದ್ರೂ ತಿರಕ್ಕೊಳ್ಳೊ possibility ಇದ್ಯಾ ?'

'ಛೆ, ಇಂಥಾ ಪೆದ್ದ ಪ್ರಶ್ನೆ ನಿಮ್ಮ ಬಾಯಿಂದ ಬರಬಾರದು ಮಿಸ್ಟರ್ ಸುಬ್ಬಯ್ಯ. ಈ ಟಾನಿಕ್ಕು ಕುಡಿದ್ರೆ, ಏನಾಗತ್ತೆ ? ದೇಹದಲ್ಲಿ ಕಬ್ಬಿಣದ ಅಂಶ ಹೆಚ್ಚಾಗೊಲ್ಲವೇ ? ಕಬ್ಬಿಣಕ್ಕೆ ನೀರು ತಗಲಿದರೆ ? ತುಕ್ಕು ಹಿಡಿದು ಬಿಡತ್ತೆ. ಅಷ್ಟು ಹೊಳೀಲಿಲ್ಲವೆ ?......ಥತ್, ಬೇಕೂಫ್ ನನ್ಮಗನೇ, ಒಳ್ಳೆ ಮಾತಲ್ಲಿ ಜಾಗ ಖಾಲಿ ಮಾಡುತೀಯೋ, ಇಲ್ಲಾ ಚೆನ್ನಾಗಿ ತದಕಿ ದೊಡ್ಡಾಸ್ಪತ್ರೆಗೇ ಕಳಿಸೋಣವೋ ?'



ಏನೇ ಹಾಗ್ ನೋಡ್ತೀಯ ದುರುಗುಟ್ಕೊಂಡು ಇನ್ಮೇಲೆ ?
ನನ್ನ ಹೆದರ್ಸಕ್ಕೆ ಆಗಲ್ಲ ನಿಂಗೆ.

ಶುಭಾಶಯಗಳೊಂದಿಗೆ

ಸ್ಪೈಸ್ ಕ್ರೀಟ್

ಪೀಣ್ಯ ಮೂರನೆಯ ಹಂತ, ಪೀಣ್ಯ
ಬೆಂಗಳೂರು–560058.

ದೂರವಾಣಿ : 608186
609026

ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್
ಎಂಡ್ ಫೋಟೋ ಟೈಪ್ ಸೆಟರ್ಸ್

3/3, 1ನೇ ಮುಖ್ಯ ರಸ್ತೆ, ಹೊಸ ತರಗು
ಬೆಂಗಳೂರು 560002

ಶುಭಾಶಯಗಳೊಂದಿಗೆ

ಯುನೈಟೆಡ್ ಸೇಲ್ಸ್ ಎಂಟರ್‌ಪ್ರೈಸಸ್

94/2 ಸರ್ದಾರ್ ಪತ್ರಪ್ಪ ರಸ್ತೆ
ಶೌಕತ್ ಮೊಹಲ್ಲ
ಬೆಂಗಳೂರು–560002


ಉತ್ತಮ ದರ್ಜೆ ಉಕ್ಕಿನ ಸರಬರಾಜುದಾರರು

ದೂರವಾಣಿ : 221107

ಶುಭಾಶಯಂಗಳೊಂದಿಗೆ

ಬಿ. ಎಸ್. ವಿಜಯೇಂದ್ರ ಅಸೋಸಿಯೇಟ್ಸ್

281, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು-560010



ಶುಭಾಶಯಗಳೊಂದಿಗೆ

ಶ್ರಿಂಗಾರ್ ಇಲೆಕ್ಟ್ರಿಕಲ್ಸ್


ಇಲೆಕ್ಟ್ರಿಕಲ್ ಇಂಜಿನಿಯರ್ಸ್ ಹಾಗೂ ಪ್ರಥಮ ದರ್ಜೆಯ ಕಂಟ್ರಾಕ್ಟರ್ಸ್
ತುಮಕೂರು ರಸ್ತೆ, ಪೀಣ್ಯ
ಬೆಂಗಳೂರು–560058

ದೂರವಾಣಿ : 385449
350984

ಶುಭಾಶಯಗಳೊಂದಿಗೆ

ಟೆಕ್ನೊಲಿಂಕ್ ಎಂಟರ್‌ಪ್ರೈಸಸ್

35, 5ನೇ ಕ್ರಾಸ್, 1ನೇ ಮೇನ್, ಎಸ್. ಕೆ. ಗಾರ್ಡನ್
ಬೆನ್‌ಸನ್ ಟೌನ್, ಬೆಂಗಳೂರು-560046




ಶುಭಾಶಯಗಳೊಂದಿಗೆ

ಎಕ್ಸಲ್ ಟೂಲ್ಸ್ ಎಂಡ್ ಇಂಜಿನೀಯರಿಂಗ್ ಎಂಟರ್‌ಪ್ರೈಸಸ್

ಬಿ-20, 1ನೇ ಕ್ರಾಸ್, 1ನೇ ಸ್ಟೇಜ್, ಪೀಣ್ಯ ಇಂಡಸ್ಟ್ರಿಯಲ್ ಎಸ್ಟೇಟ್
ಬೆಂಗಳೂರು–560058

ಶುಭಾಶಯಗಳೊಂದಿಗೆ



ಎಸ್. ವಿ. ಆರ್. ಏಜನ್ಸೀಸ್

ಬೆಂಗಳೂರು

REGISTERED No. BGW-180

ಶುಭಾಶಯಗಳೊಂದಿಗೆ



ಟರ್ನ್-ಕೀ ಕನ್‌ಸ್ಟ್ರಕ್ಷನ್ಸ್
(ಪ್ರೈ) ಲಿಮಿಟೆಡ್

11ನೇ ಮೇನ್ ರಸ್ತೆ
ಬೆಂಗಳೂರು-560 003

ಫೋನ್ 364118

